# 8

# ನಾನು ಸದಸ್ಯನಾಗಲು ಬಯಸುವ ಸಭೆ

# (2:42-47)

ನಮ್ಮ ಹಿಂದಿನ ಪಾಠದಲ್ಲಿ ಗಮನಿಸಿದಂತೆ ಮೂರು ಸಾವಿರ ಜನರು ಪಂಚಾಶತ್ತಮ ದಿನದಂದು ವಾಕ್ಯವನ್ನು ಕೇಳಿದರು ಮತ್ತು ದೀಕ್ಷಾಸ್ನಾನ ಹೊಂದಿದರು. ನಂಬುವದು ಮತ್ತು ದೀಕ್ಷಾಸ್ನಾನ ಹೊಂದುವದು ಕ್ರಿಸ್ತನೊಂದಿಗಿನ ನಮ್ಮ ಸಂಬಂಧದ ಪ್ರಾರಂಭವಾಗಿದೆ: ನಾವು ಆತನ ಜೊತೆಯಲ್ಲಿ *ನಡೆಯಬೇಕು.* ಅಧ್ಯಾಯದ ಕೊನೆಯ ವಚನವು (ವಚನಗಳು 42-47) ಕ್ರಿಸ್ತನಲ್ಲಿ "ಹಸುಗೂಸುಗಳಾಗಿರುವ" ಇವರು ಹೇಗೆ ನಡೆಯುವದನ್ನು ಕಲಿತರು ಎಂದು ಹೇಳುತ್ತದೆ (1 ಕೊರಿಂಥ 3:1).

ಈ ವಚನಗಳನ್ನು ನಾವು ಧ್ಯಾನಿಸುವಾಗ, ಒಂದು ಅದ್ವಿತೀಯವಾದ ಸಭೆಯ ಚಿತ್ರವನ್ನು ನಾವು ನೋಡುತ್ತೇವೆ - ಕ್ರಿಸ್ತನಿಗಾಗಿ ಜ್ವಲಿಸುವ ನವ ಕ್ರೈಸ್ತರನ್ನು ಹೊಂದಿದ ಸಭೆ. ಆ ಅನ್ಯೋನ್ಯತೆಯ ಭಾಗವಾಗಬೇಕೆಂದು ನಾನು ಎಷ್ಟು ಬಯಸುತ್ತೇನೆ! ಈ ಗುಂಪಿನ ಅನೇಕ ಗುಣಗಳನ್ನು ನಾವು ನಮೂದಿಸಬಹುದು: ಅದು ಕಲಿಯು ಸಭೆ, ಅನ್ಯೋನ್ಯತೆಯ ಸಭೆ, ಪ್ರಾರ್ಥಿಸುವ ಸಭೆ, ಕ್ರಿಯಾಶೀಲವಾದ ಸಭೆ ಮತ್ತು ಅಭಿವೃದ್ಧಿ ಹೊಂದುವ ಸಭೆಯಾಗಿತ್ತು. "ನಾನು ಸದಸ್ಯನಾಗಲು ಬಯಸುವ ಸಭೆಯ" ಐದು ಗುಣಗಳನ್ನು ನಾನು ಇಲ್ಲಿ ಒತ್ತಿ ಹೇಳುತ್ತೇನೆ.

## ಆರಾಧಿಸುವ ಸಭೆ (2:42)

ವಚನ 42ರ ಪ್ರಾರಂಭದಲ್ಲಿನ "ಮತ್ತು"ಎಂಬ ಪದವನ್ನು ಗಮನಿಸಿರಿ, ಈ ವಚನವನ್ನು ಮೊದಲಿನ ವಚನಕ್ಕೆ ಒಟ್ಟುಗೂಡಿಸಿರಿ.[1] ಮೂರು ಸಾವಿರ ಜನರು ದೀಕ್ಷಾಸ್ನಾನ ಹೊಂದಿದ ತಕ್ಷಣ, ಅವರು ಹೊಸ ಕ್ರೈಸ್ತರಾಗಿ ಒಂದೇ ದೇಹವಾಗಿ ಕಾರ್ಯಮಾಡುವದಕ್ಕೆ *ತಕ್ಷಣವೇ* ತೊಡಗಿದರು. ಅವರೇನು ಮಾಡಿದರು? ವಚನ 42 ಇದರ ಸಂಕ್ಷಿಪ್ತ ವಿವರಣೆಯನ್ನು ಕೊಡುತ್ತದೆ: "ಇವರು ಅಪೊಸ್ತಲರ ಬೋಧನೆಯನ್ನು[2] ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು."

ಸಭೆಯು ಸ್ಥಾಪಿಸಲ್ಪಟ್ಟಾಗ, ಸೂಚನೆಗಳ ಒಂದು ಕೈಪಿಡಿಯನ್ನು ಅದಕ್ಕೆ ತಕ್ಷಣವೇ ಕೊಡಲಿಲ್ಲ.[3] ಬದಲಾಗಿ, ಏನನ್ನು ನಂಬಬೇಕು ಮತ್ತು ಏನು ಮಾಡಬೇಕು ಎಂದು ಸಭೆಯ ಸದಸ್ಯರಿಗೆ ಕಲಿಸುವಂತೆ ದೇವರು ಅಪೊಸ್ತಲರನ್ನು ಕೊಟ್ಟನು.[4] ಜನರಿಗೆ ದೀಕ್ಷಾಸ್ನಾನ ಕೊಟ್ಟ ತರುವಾಯ, ಆತನು ಆಜ್ಞೆ ಕೊಟ್ಟದ್ದನ್ನೆಲ್ಲಾ ಪಾಲಿಸುವದಕ್ಕೆ ಬೋಧಿಸುವಂತೆ ಯೇಸು ಅಪೊಸ್ತಲರನ್ನು ಎಚ್ಚರಿಸಿದ್ದನು (ಮತ್ತಾಯ 28:19, 20). ಇದನ್ನು ಮಾಡಲು ಅವರು ಸಂತೋಷಪಟ್ಟಿದ್ದರು, ಮತ್ತು ಯಾರು ದೀಕ್ಷಾಸ್ನಾನ ಹೊಂದಿದ್ದರೋ ಅವರು ಈ ಬೋಧನೆಗಳನ್ನು ಕೇಳಲು ಸಂತೋಷಪಟ್ಟರು. ಹೊಸ ಜೀವನದ ಕುರಿತು ಈ ಹೊಸ ಕ್ರೈಸ್ತರು ಕಲಿಯುವದಕ್ಕೆ ಆಸಕ್ತರಾಗಿದ್ದರು. ಆದುದರಿಂದ ಅವರು ದೇವರ ಪರವಾಗಿ ಮಾತಾಡುವವರ [5] ಮಾತುಗಳನ್ನು ಕೇಳಿಸಿಕೊಳ್ಳಲು ಸದಾ ನಿರತರಾಗಿದ್ದರು. ಇಂದು ಅದೇ ಬೋಧನೆಗಳು "ಹೊಸ ಒಡಂಬಡಿಕೆಯಲ್ಲಿ" ಲಭ್ಯವಿದೆ.[6] ದೇವರ ಚಿತ್ತವನ್ನು ತಿಳುಕೊಳ್ಳಲು ಆದಿ ಕ್ರೈಸ್ತರಂತೆ *ನಾವು* ಉತ್ಸುಕರಾಗಿದ್ದೇವೊ? ದೇವರ ವಾಕ್ಯವನ್ನು ಓದಲು ಮತ್ತು ಕಲಿಯಲು *ನಿರತರಾ*

*ಗಿದ್ದೇವೋ?* ನಾವು ಅದನ್ನು ಸದಾ ಮಾಡುತ್ತೇವೋ?

"ನಿರತರಾಗಿದ್ದರು" ಎಂಬ ಪದವು ವಚನ 42ರಲ್ಲಿ ನಮೂದಿಸಿದ ಎಲ್ಲ ನಾಲ್ಕು ಕಾರ್ಯಗಳಿಗೆ ಅನ್ವಯವಾಗುತ್ತದೆ. ನಂತರ ಕ್ರೈಸ್ತರು "ಅನ್ಯೋನ್ಯತೆಗೆ" ತಮ್ಮನ್ನು ಸದಾ ನಿರತ ರಾಗಿಸಿಕೊಂಡರು. "ಅನ್ಯೋನ್ಯತೆ" ಎಂಬ ಪದವು ಗ್ರೀಕ ಭಾಷೆಯ *ಕೊಯ್ನೊನಿಯ* ವಿಶೇಷ ಪದ ಭಾಷಾಂತರವಾಗಿದೆ. *ಕೊಯ್ನೊನಿಯದ* ಮೂಲ ಅರ್ಥವು "ಸಮಾನವಾಗಿ ಹೊಂದುವದು" ಮತ್ತು ಅದನ್ನು ಒಮ್ಮೊಮ್ಮೆ "ಹಂಚಿಕೊಳ್ಳುವದು" ಎಂದು ಭಾಷಾಂತರಿಸಲಾಗಿದೆ.[7] ಯಾರೊಂದಿಗಾದರೂ ನಾವು ಸಮಾನ ಸಂಬಂಧವನ್ನು ಹಂಚಿಕೊಳ್ಳುವದನ್ನು ಈ ಪದವು ಸೂಚಿಸುತ್ತದೆ. ಆದುದರಿಂದ ನಾವು, ದೇವರು, ಕ್ರಿಸ್ತನು ಮತ್ತು ಪರಿಶುದ್ಧಾತ್ಮನೊಂದಿಗೆ ಅನ್ಯೋನ್ಯತೆ ಹೊಂದಿದ್ದೇವೆ ಎಂದು ಓದುತ್ತೇವೆ[8] (1 ಯೋಹಾನ 1:7). ನಮ್ಮ ಸಮಾನ ಬಂಧವನ್ನು ಸೂಚಿಸಿ. ಹೊಸ ಒಡಂಬಡಿಕೆಯಲ್ಲಿ ಈ ಪದವು ಅನೇಕ ವಿಧದಲ್ಲಿ *ಕೊಯ್ನೊನಿಯ* ಭಾಷಾಂತರಿಸಲ್ಪಟ್ಟಿದೆ, 1 ಕೊರಿಂಥ 10:16 (KJV)[9] ರಲ್ಲಿ "ಪಾಲುಗಾರಿಕೆ" ಎಂದಿದೆ. ಮತ್ತು "ಸಹಾಯ" ಎಂದು ರೋಮಾಪುರ 15:26 (ಹೋಲಿಸು. 2 ಕೊರಿಂಥ 9:13)ರಲ್ಲಿ ಇದೆ. ನಾವು ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳುವಾಗ ಮತ್ತು ವಾರದ ಮೊದಲ ದಿನದಲ್ಲಿ ನಾವು ಕೊಡುವಾಗ, ನಮ್ಮ ಸಾಮಾನ್ಯ ನಂಬಿಕೆಯನ್ನು ವ್ಯಕ್ತ ಮಾಡುತ್ತೇವೆ.[10]

*ಕೊಯ್ನೊನಿಯ* ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಹಣ ಸಹಾಯವನ್ನು ಸೂಚಿಸಿ ಅನೇಕ ಬಾರಿ ಉಪಯೋಗಿಸಲಾಗಿದೆ. ಮತ್ತು ವಚನ 44, ಆದಿ ಕ್ರೈಸ್ತರು ಎಲ್ಲವನ್ನು *ಹುದುವಾಗಿ* ಅನುಭೋಗಿಸುತ್ತಾ ಇದ್ದರು (*ಕೋಯ್ನಾ*, ಮೂಲ *ಕೊಯ್ನೊನಿಯ*) ಎಂದು ಸೂಚಿಸುವದರಿಂದ, ಕೆಲ ವ್ಯಾಖ್ಯಾನಕಾರರ ಪ್ರಕಾರ ಹಣ ಸಹಾಯವೇ ಮೂಲ ವಿಚಾರವಾಗಿತ್ತು ಈ ವಚನದಲ್ಲಿನ *ಕೊಯ್ನೊನಿಯವನ್ನು* ಕೆಲವು ಭಾಷಾಂತರಿಗಳು, "ಸಹಾಯ" ಅಥವಾ ಅದರ ಸಮಾನ ಪದ ಎಂದು ಭಾಷಾಂತರಿಸಿವೆ.[11] ಈ ಪದದ ಅರ್ಥವನ್ನು ವಿಶಾಲವಾಗಿ ನಾವು ಆಲೋಚಿಸುವದು ಉತ್ತಮ; ಅದು ಲೋಕದ ವಸ್ತುಗಳನ್ನು ಹಂಚಿಕೊಳ್ಳುವದನ್ನು ಒಳಗೊಂಡಿದೆ, ಆದರೆ ಅದು ಯೇಸುವಿನಲ್ಲಿನ ಕ್ರೈಸ್ತರ ನವ ಜೀವನದ ಸಂಪೂರ್ಣತೆಯನ್ನೂ ಒಳಗೊಂಡಿದೆ. ನ್ಯು ಇಂಗ್ಲಿಷ್ ಬೈಬಲ್ ಈ ವಿಚಾರವನ್ನು ಹೀಗೆ ವ್ಯಕ್ತ ಮಾಡುತ್ತದೆ: "ಅವರು ತಮ್ಮ ಸಾಮಾನ್ಯ ಜೀವನವನ್ನು ಹಂಚಿಕೊಳ್ಳಲು ಸೇರಬಂದರು." ನಮ್ಮ ಸಹ ಕ್ರೈಸ್ತರೊಂದಿಗೆ ನಮ್ಮ ಸಂಬಂಧದ ಕುರಿತು ಅವರಂತೆಯೇ ಅಷ್ಟೇ ಕಳಕಳಿಯುಳ್ಳವರಾಗಿದ್ದೇವೆಯೋ ಎಂದು ಪ್ರಶ್ನಿಸಿಕೊಳ್ಳಬೇಕು. ನಮ್ಮ ಕ್ರಿಸ್ತನಲ್ಲಿನ ಸಹೋದರ ಮತ್ತು ಸಹೋದರಿಯರನ್ನು ತಿಳುಕೊಳ್ಳುವಲ್ಲಿ ಮತ್ತು ನಮ್ಮ ಒಗ್ಗಟ್ಟನ್ನು ವ್ಯಕ್ತ ಮಾಡುವಲ್ಲಿ ನಾವು ಅಷ್ಟೇ ಬದ್ಧರಾಗಿದ್ದೇವೋ? ಮೂರನೇಯದಾಗಿ, ಆ ನವ ಕ್ರೈಸ್ತರು "ರೊಟ್ಟಿ ಮುರಿಯುವದರಲ್ಲಿ" ಸದಾ ನಿರತರಾಗಿದ್ದರು. "ರೊಟ್ಟಿ ಮುರಿಯುವದು" ಕರ್ತನ ಭೋಜನವನ್ನು ಸೂಚಿಸಬಹುದು (20:7; 1 ಕೊರಿಂಥ 10:16).[12] ಅಥವಾ ಒಂದು ಸಾಮಾನ್ಯ ಊಟವಾಗಿರಬಹುದು (2:46). ಲೂಕನು ಕರ್ತನ ಭೋಜನವನ್ನು ಕುರಿತು ಮಾತಾಡಿದ್ದಾನೆಂದು ಪರಿಚ್ಛೇದವು[13] ಸೂಚಿಸುತ್ತದೆ. ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳಲು ಆದಿ ಕ್ರೈಸ್ತ ಸಭೆಯು ವಾರದ ಮೊದಲ ದಿವಸದಲ್ಲಿ ಸೇರಿ ಬರುತಿತ್ತು ಎಂದು ನಾವು ನಂತರ ಗಮನಿಸುತ್ತೇವೆ.[14] ಈ ಪದ್ಧತಿಯು ತಕ್ಷಣವೇ ಪ್ರಾರಂಭವಾಯಿತು ಮತ್ತು ವಾರದ ಮೊದಲ ದಿನದಲ್ಲಿ ಕ್ರಿಸ್ತನಲ್ಲಿನ ಈ ಹಸುಗೂಸುಗಳು ನಂಬಿಕೆಯಿಂದ ಪಾಸು ತೆಗೆದು ಕೊಳ್ಳುವದಕ್ಕೆ ತೊಡಗಿದರು. ಇಂದು ಕೆಲವರು ಬೇಕಾಬಿಟ್ಟಿಯಾಗಿ ಕರ್ತನ ಮರಣವನ್ನು ನೆನಪಿಸಿಕೊಳ್ಳುವದಕ್ಕೆ ಬರುವದನ್ನು ನಾನು ನೋಡುವಾಗ, ರೊಟ್ಟಿ ಮುರಿಯುವದರಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡವರ ಆತ್ಮದ ಪುನರುತ್ಥಾನಜೀವನವನ್ನು ನಾನು ಹಿಂಬಾಲಿಸುತ್ತೇನೆ!

ವಚನ 42ರಲ್ಲಿ ನಮೂದಿಸಿದ ಕೊನೆಯ ವಿಚಾರ ಪ್ರಾರ್ಥನೆ: "ಅವರು ಪ್ರಾರ್ಥನೆಯಲ್ಲಿ

ನಿರತರಾಗಿದ್ದರು ..." ಸಭೆಯು ಪ್ರಾರ್ಥನೆಯ ವಾತಾವರಣದಲ್ಲಿ ಪ್ರಾರಂಭವಾಯಿತ್ತು ಮತ್ತು ಅದರಲ್ಲಿ ಮುಂದುವರಿಯಿತು. ಆದಿ ಕ್ರೈಸ್ತರು ಪ್ರತಿ ದಿನದ ಜೀವನದ ಸವಾಲುಗಳನ್ನು ಎದುರಿಸುವದಕ್ಕೆ ಕಾರಣವೇನೆಂದರೆ ಅವರು ಕರ್ತನನ್ನು ಪ್ರಾರ್ಥನೆಯಲ್ಲಿ ಭೇಟಿಯಾಗುತ್ತಿದ್ದರು.

ವಚನ 42ರಲ್ಲಿನ ಮುಖ್ಯ ಪ್ರಸ್ತಾಪವು *ಆರಾಧನೆಯಾಗಿತ್ತು*. ಜನರು ದೀಕ್ಷಾಸ್ನಾನ ಹೊಂದಿದಾಗ, ಅವರು "ದೇವರನ್ನು ಆರಾಧಿಸುವದರಲ್ಲಿ ನಿರತರಾದರು"! ನಮಗೆ ಇಲ್ಲಿ ಒಂದು ಪಾಠವಿದೆ: ಕರ್ತನಿಗೆ ನಮ್ಮ ಪ್ರತಿಷ್ಠೆಯನ್ನು ವ್ಯಕ್ತ ಮಾಡುವದರ ಮಧ್ಯದಲ್ಲಿಯೇ ಆರಾಧನೆಯಿದೆ. ನಾವು ಕ್ರೈಸ್ತರಾಗಿ ಬೆಳೆಯುವದರ ಮಧ್ಯ, ದೇವರಿಗೆ ನಂಬಿಗಸ್ತರಾಗಿ ನಡೆದುಕೊಳ್ಳುವದರ ಮಧ್ಯ! ಇದು *ಸಾರ್ವಜನಿಕ* ಆರಾಧನೆಯಾಗಿತ್ತು. ಕ್ರಿಸ್ತನಲ್ಲಿನ ಸಹೋದರ ಸಹೋದರಿಯರು *ಒಟ್ಟಾಗಿ* ಆರಾಧಿಸಿದರು. ಒಬ್ಬರಿಗೊಬ್ಬರು ಹತ್ತಿರವಾಗುವದಕ್ಕೂ ಮತ್ತು ದೇವರಿಗೆ ಸಮೀಪವಾಗುವದಕ್ಕೂ ಆರಾಧನೆಯನ್ನು ಬಿಟ್ಟರೆ ಯಾವದೂ ಪ್ರಾಮುಖ್ಯವಾಗಲ್ಲ. ಪಂಚಾಶತ್ತಮ ದಿನವು ವಾರದ ಮೊದಲ ದಿನ ಇದ್ದುದರಿಂದ, ನನ್ನ ಊಹೆಯು ಏನೆಂದರೆ, ಆ ದಿನವೇ, ಮೂರು ಸಾವಿರನೇಯ ಆತ್ಮವು ದೀಕ್ಷಾಸ್ನಾನ ಹೊಂದಿದ ತರುವಾಯ, ಯೆರೂಸಲೇಮಿನಲ್ಲಿನ ಹೊಸ ಸಭೆಯು, ತಮ್ಮ ದೇವರ ವಾಕ್ಯವನ್ನು ಕೇಳುವದಕ್ಕೂ, ಪ್ರಾರ್ಥಿಸುವದಕ್ಕೂ ಮತ್ತು ತಮ್ಮ ಪ್ರಿಯ ರಕ್ಷಕನ ಮರಣವನ್ನು ನೆನಪಿಸುವದಕ್ಕೂ ಸೇರಿ ಬಂದರು! ನಾವು ಒಟ್ಟಾಗಿ ಆರಾಧಿಸುವ ಸಮಯವು ಪ್ರಾಮಾಣಿಕವಾಗಿರುವಂತೆ ದೇವರು ಸಹಾಯ ಮಾಡಲಿ!

## ಭಕ್ತಿಯ ಸಭೆ (2:43)

ಪಂಚಾಶತ್ತಮ ದಿನದಂದು ದೀಕ್ಷಾಸ್ನಾನ ಹೊಂದಿನ ಮೂರು ಸಾವಿರ ಜನರ ಕುರಿತು ಒಂದು ಸಂಕ್ಷಿಪ್ತ ಹೇಳಿಕೆಯನ್ನು ಕೊಟ್ಟ ತರುವಾಯ ಲೂಕನು, ಆದಿ ಕ್ರೈಸ್ತ ಸಭೆಯ ಜೀವನದ ರೂಪ ರೇಶೆಯನ್ನು ವಚನಗಳು 43 ದಿಂದ 47 ವರೆಗೆ ಕೊಟ್ಟನು.[15] ಅವನು ಹೀಗೆ ಹೇಳುವದರ ಮೂಲಕ ಪ್ರಾರಂಭಿಸಿದನು, "ಎಲ್ಲರಿಗೂ ಭಯ ಉಂಟಾಯಿತು, ಇದಲ್ಲದೆ ಅನೇಕ ಅದ್ಭುತಕಾರ್ಯಗಳೂ[16] ಸೂಚಕಕರ್ಕಾಯಗಳೂ ಅಪೊಸ್ತಲರ ಕೈಯಿಂದ ನಡೆದವು"[17] (ವಚನ 43). "ಅದ್ಭುತಗಳು ಮತ್ತು ಸೂಚಕಕಾರ್ಯಗಳು" ಇದು ಅಪೊಸ್ತಲರು ಮಾಡಿದ ಮಹತ್ತುಗಳನ್ನು ಸೂಚಿಸುತ್ತದೆ.[18] ಅವರು ಸುವಾರ್ತೆಯನ್ನು ಸಾರುವದಕ್ಕೆ ಹೋಗುವಾಗ "ಸೂಚಕಕಾರ್ಯಗಳು" ಅವರನ್ನು ಹಿಂಬಾಲಿಸುವವು ಎಂದು ಯೇಸು ಅವರಿಗೆ ವಾಗ್ದನ ಮಾಡಿದ್ದನು (ಮಾರ್ಕ 16:17, 18); ಆ ವಾಗ್ದಾನದ ನೆರವೇರಿಕೆಯ ಪ್ರಾರಂಭ ಇದಾಗಿತ್ತು. ಅವರು ಮಾಡಿದ ಕೆಲವು ಅದ್ಭುತ ಕಾರ್ಯಗಳ ಕುರಿತು ನಂತರ ನೋಡೋಣ.[19] ಈಗಿನ ಕ್ಷಣಕ್ಕೆ ಅದು ಅಮೋಘವಾಗಿತ್ತು ಎಂದು ಹೇಳಲಾಗಿದೆ!

## ನಿಸ್ವಾರ್ಥ ಸಭೆ (2:44, 45)

ವಚನ 44 ಮತ್ತು 45, ವಚನ 42ರಲ್ಲಿ ನಮೂದಿಸಲಾದ ಅನ್ಯೋನ್ಯತೆಯ ದೃಢ ಉದಾಹರಣೆಯನ್ನು ಕೊಡುತ್ತದೆ: "ಇವರು ಅಪೊಸ್ತಲಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು."

ಜಗತ್ತು ಇಂಥದ್ದನ್ನು ಮೊದಲು ಎಂದೂ ನೋಡಿಲ್ಲ! ಸಭೆಯಲ್ಲಿನ ಅನೇಕರು ಕೆಲ ದಿನಗಳ ಮುಂಚೆ ಒಬ್ಬರಿಗೊಬ್ಬರು ಅಪರಿಚಿತರಾಗಿದ್ದರು. ಅವರು ಬೇರೆ ಬೇರೆ ಹಿನ್ನೆಲೆ ಮತ್ತು ಸಂಸ್ಕೃತಿಯಿಂದ ಬಂದಿದ್ದರು, ಆದಾಗ್ಯೂ ಅವರು ಒಬ್ಬರಿಗೊಬ್ಬರು ಸಹಾಯ ಮಾಡುವದಕ್ಕೂ, ಬಲಹೀನರಿಗೆ ಮತ್ತು ಅಸಹಾಯಕರಿಗೆ ವಿಶೇಷ ಗಮನ ಕೊಡುವದಕ್ಕೆ ಪ್ರಾರಂಭಿಸಿದರು! ಧರ್ಮಶಾಸ್ತ್ರವು ಬಡವರನ್ನು ಪರಿಪಾಲಿಸಬೇಕೆಂದು ಆಜ್ಞೆಕೊಟ್ಟಿದ್ದರೂ,

ಯೆಹೂದ್ಯರು ಬಡವರನ್ನು ಅಲಕ್ಷಿಸಿದ್ದರು. ಅನ್ಯರೂ ಕೂಡ, ಕೆಳ ಮಟ್ಟದಲ್ಲಿರುವವರ ಕುರಿತು ಅಲಕ್ಷಿಸಿದ್ದರು. ಸಂಪೂರ್ಣ ಸಮುದಾಯವೇ ಯೇಸುವಿನ ಈ ಹಿಂಬಾಲಕರ ವಿಷಯದಲ್ಲಿ ಮೆಚ್ಚುಗೆ ಹೊಂದಿದ್ದು ಆಶ್ಚರ್ಯವಲ್ಲ (2:47).

ವಚನಗಳು 44 ಮತ್ತು 45 ಬಹು ಕಲುಕುವ ಮತ್ತು ಸವಾಲಿನ ವಚನಗಳಾಗಿವೆ. ದುರದೃಷ್ಟಕರವಾಗಿ ಅವುಗಳ ತಪ್ಪಾಗಿಯೂ ಉಪಯೋಗಿಸಲ್ಪಟ್ಟಿವೆ. ಈ ವಚನಗಳನ್ನು ಕೆಲವರು, "ಕ್ರೈಸ್ತ ಸಮಾನವಾದದ ಉದಾಹರಣೆ" ಎಂದು ಕರೆದಿದ್ದಾರೆ. ಆದರ್ಶ ಸಮಾಜವನ್ನು ಸ್ಥಾಪಿಸುವ ಬಯಕೆಯಿದ್ದ ಅನೇಕ ಜನರು, ಈ ಸಮಾಜವನ್ನು ಸ್ಥಾಪಿಸುವ ಬಯಕೆಯಿದ್ದ ಅನೇಕ ಜನರು, ಈ ಮಾತುಗಳನ್ನು ತಮ್ಮ ಪ್ರಯತ್ನಕ್ಕೆ ಪೂರಕವಾಗಿ ಉಪಯೋಗಿಸುತ್ತಾರೆ.[20] ಕೆಲವು ಪಂಥದ ನಾಯಕರು ಈ ವಚನಗಳನ್ನು ಉಪಯೋಗಿಸಿ, ತಮ್ಮ ಹಿಂಬಾಲಕರು ತಮ್ಮ ಆಸ್ತಿಯನ್ನು ಮಾರುವದಕ್ಕೂ ಮತ್ತು ಅದನ್ನು ತಮಗೆ ಕೊಡುವದಕ್ಕೂ ಒತ್ತಾಯಿಸುತ್ತಾರೆ. ಲೂಕನು ಇಲ್ಲಿ ಏನನ್ನು ಹೇಳುತ್ತಿದ್ದಾನೆ ಮತ್ತು ಇಲ್ಲ ಎನ್ನುವದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಮೊದಲು, ಲೂಕನು ತಾವು ಹೊಂದಿದ್ದ ಸ್ವಾಸ್ತ್ಯವನೆಲ್ಲ ಸಭೆಯ ಪ್ರತಿಯೊಬ್ಬ ಸದಸ್ಯರು ತಕ್ಷಣವೇ ಮಾರಿ ಬಿಟ್ಟು ಒಂದು ಸಾಮಾನ್ಯ ನಿಧಿಯಲ್ಲಿ ಹಾಕಬೇಕೆಂದು ಹೇಳುತ್ತಿಲ್ಲ. "ತಮ್ಮದೆಲ್ಲವನ್ನು ಹುದುವಾಗಿ ಅನುಭವಿಸುತ್ತಿದ್ದರು" ಎಂಬ ಮಾತುಗಳನ್ನು ನಾವು ನೋಡುವದಾದರೆ, ಹಾಗೆ ಹೇಗೆ ವ್ಯಕ್ತ ಪಡಿಸುತ್ತದೆಂದು ನಾವು ನೋಡೋಣ: ನಾವು ಆಲೋಚಿಸ ಬಹುದು.[21] ವಚನ 45ರ ಆಲೋಚನೆಯನ್ನು NASBಯಲ್ಲಿ ಹೇಗೆ ವ್ಯಕ್ತ ಪಡಿಸುತ್ತದೆಂದು ನಾವು ನೋಡೋಣ: "ತಮ್ಮ *ಚರಸ್ಥಿರ* ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು ..."[22] (ಒತ್ತಿ ಹೇಳಿದ್ದು ನನ್ನದು.) ವಚನ 46ನ್ನು ಗಮನಿಸಿದರು: ದಿನನಿತ್ಯ ಸಭಿಕರು "ಮನೆ ಮನೆಗಳಲ್ಲಿ" ರೊಟ್ಟಿ ಮುರಿಯುತ್ತಿದ್ದರು. ಸರ್ವ ಕ್ರೈಸ್ತರು ತಮ್ಮ ಮನೆಗಳನ್ನು ತಕ್ಷಣವೇ ಮಾರಿದ್ದರೇ, ಯಾರ ಮನೆಗಳಲ್ಲಿ ಅವರು ಸೇರುತ್ತಿದ್ದರು? ಕೆಲ ಸಮಯದ ನಂತರ, ಅಧ್ಯಾಯ 4 ಮತ್ತು 5ರಲ್ಲಿ, ಮಾರುವ ಕಾರ್ಯವು ಇನ್ನೂ ಸಾಗುತ್ತಿತ್ತು. ಇನ್ನು ಕೆಲ ಕಾಲದ ನಂತರ ಕ್ರೈಸ್ತರು "ಮರಿಯಳ ಮನೆಯಲ್ಲಿ" ಪ್ರಾರ್ಥನೆಗಾಗಿ ಸೇರಿ ಬಂದರು (12:12). ಅವಳು ಇನ್ನೂ ತನ್ನ ಮನೆಯನ್ನು ಹೊಂದಿದ್ದಳು. ಸಾಮಾನ್ಯ ನಿಧಿಗೆ ಹಣವನ್ನು ಹಾಕುವದಕ್ಕೆ, ಯೆರೂಸಲೇಮಿನಲ್ಲಿದ್ದ ಪ್ರತಿ ಕ್ರೈಸ್ತರು ತಕ್ಷಣವೇ *ಓಡಿಹೋಗಲಿಲ್ಲ.*

ಮತ್ತೆ, ಈ ಹೊಸ ಕ್ರೈಸ್ತ "ಸಮಾಜ" ಸೇರುವದಕ್ಕಾಗಿ, ಅಪೊಸ್ತಲರು ತಮ್ಮ ಆಸ್ತಿಯನ್ನು ಮಾರಲೇ ಬೇಕು ಎಂದು ಲೂಕನು ಹೇಳಲಿಲ್ಲ. ಅಧ್ಯಾಯ 5ರಲ್ಲಿ, ಅನನಿಯ ಮತ್ತು ಸಫೈರಳು ತಮ್ಮ ಆಸ್ತಿಯನ್ನು ಮಾರಿದ ಎಲ್ಲಾ ಹಣವನ್ನು ಒಪ್ಪಿಸಿದ್ದೇವೆಂದು ನಾಟಕವಾಡಿದಾಗ, ಪೇತ್ರನು ಅನನೀಯನಿಗೆ: "ಸೈತಾನನು ನಿನ್ನ ಹೃದಯದಲ್ಲಿ ತುಂಬಿ ಕೊಂಡದ್ದೇನು? ನೀನು ಯಾಕೆ ಆ ಹೊಲದ ಕ್ರಯದಲ್ಲಿ ಕೆಲವನ್ನು ಬಚ್ಚಿಟ್ಟುಕೊಂಡು ಪರಿಶುದ್ಧಾತ್ಮನನ್ನು ವಂಚಿಸಬೇಕೆಂದಿದ್ದೀ? *ಆ ಆಸ್ತಿ ಇದ್ದಾಗ ನಿನ್ನದಾಗಿಯೇ ಇತ್ತಲ್ಲವೇ. ಮಾರಿದಮೇಲೆಯೂ ಬಂದ ಹಣವು ನಿನ್ನ ಅಧೀನದಲ್ಲೇ ಇತ್ತಲ್ಲವೇ? ನೀನು ಈ ಕಾರ್ಯವನ್ನು ನಿನ್ನ ಹೃದಯದಲ್ಲಿ ಯೋಚಿಸಿಕೊಂಡದ್ದು ಯಾಕೆ? ನೀನು ಸುಳ್ಳಾಡಿದ್ದು ಮನುಷ್ಯರಿಗಲ್ಲ, ದೇವರಿಗೆ ಆಡಿದಿ ಅಂದನು*" (5:3, 4; ಒತ್ತಿ ಹೇಳಿದ್ದು ನನ್ನದು).

ಬೇರೆ ಮಾತುಗಳಲ್ಲಿ, ಅವರು ತಮ್ಮ ಆಸ್ತಿಯನ್ನು ಮಾರುವ ಮೊದಲು, ಹೊಲವು ಅವರ ಕೈಯಲ್ಲಿತ್ತು, ಅವರು ಏನು ಬೇಕಾದರೂ ಮಾಡಬಹುದಿತ್ತು ಮತ್ತು ಅದನ್ನು ಮಾರಿದ ಮೇಲೆಯೂ ಅವರು ಏನೂ ಬೇಕಾದರೂ ಮಾಡಲು ಹಣವು ಅವರ ಕೈಯಲ್ಲಿತ್ತು. ಮಾರಿದ ಸಂಪೂರ್ಣ ಹಣವನ್ನು ತರುವದರಲ್ಲಿ ವಿಫಲರಾದದ್ದೇ ಅವರ ಪಾಪವಾಗಿತ್ತು.[23] ಅನ್ಯೋನ್ಯತೆಯ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೆಲ್ಲವನ್ನೂ ದಾನವಾಗಿ ಕೊಡಬೇಕೆಂಬ ಸೂಚನೆ

ಇರಲಿಲ್ಲ;[24] ಇದು ಅಂಥ ಸನ್ನಿವೇಶವಾಗಿರಲಿಲ್ಲ ಎಂದು ಯಾವ ಸೂಚನೆಯಿರಲಿಲ್ಲ.

ತಾವು ಸಂಪಾದಿಸಿದ್ದನ್ನು ಮಾರಿ ಇತರರ ಸಹಾಯಕ್ಕಾಗಿ ಕೊಡಬೇಕಾದರೆ ಅದು ಕಡ್ಡಾಯವಾಗಿ ಸ್ವಸಂತೋಷದಿಂದ ಮಾಡಬೇಕಿತ್ತು ಬರ್ಟನ ಕೊಫ್‌ಮನ್ ಅವರ ಹೇಳಿಕೆಯನ್ನು ನಾನು ಮೆಚ್ಚುತ್ತೇನೆ: "... ಅಪೊಸ್ತಲರ ಕೃತ್ಯದ ಸಮತಾವಾದವು, ಇಂದಿನ ಜಾಗತಿಕ ಸಮತಾವಾದವನ್ನು ಹೋಲುತ್ತದೆ, ಹೇಗೆಂದರೆ ಒಂದು ಬಂದೂಕನ್ನು ಹಿಡಿದುಕೊಂಡಿರುವ ಕಳ್ಳನ ಮುಂದೆ ಇರುವ ಕಾಣಿಕೆಯ ತಟ್ಟೆಯಂತೆ."[25]

ತಕ್ಷಣವೇ ಕ್ರೈಸ್ತರು ಎಲ್ಲವನ್ನೂ ಮಾರಿದರು ಎಂದು ಲೂಕನು ಹೇಳಲಿಲ್ಲ ಮತ್ತು ಅವರು ಮಾರಲೇ ಬೇಕಿತ್ತು ಎಂದೂ ಲೂಕನು ಹೇಳಲಿಲ್ಲ. ಹಾಗಾದರೆ, ಲೂಕನು ಏನನ್ನು ಹೇಳುತ್ತಿದ್ದನು? ಮೊದಲು, ಹೊಸ ಕ್ರೈಸ್ತರು ಒಂದು ಹೊಸ ಸವಾಲನ್ನು ಎದುರಿಸಬೇಕಿತ್ತು ಎಂದು ಹೇಳಿದನು. ಪಂಚಾಶತ್ತಮ ಹಬ್ಬಕ್ಕೆ ನಾಗರಿಕ ಜಗತ್ತಿನ ಮೂಲೆಯಿಂದ ಯೆಹೂದ್ಯರು ಬಂದಿದ್ದರು. ಅವರಲ್ಲಿ ಅನೇಕರು ದೀಕ್ಷಾಸ್ನಾನ ಹೊಂದಿದ್ದರು. ಎಲ್ಲರೂ ಅಲ್ಲದಿದ್ದರೂ ಅನೇಕರು, ಆ ಭಾಗದಲ್ಲಿ ಉಳುಕೊಂಡಿದ್ದರು.[26] ಅವರು ತಂದ ಹಣ ಬೇಗನೆ ತೀರಿಹೋಗಿರಬಹುದು. ಯೆರೂಸಲೇಮಿನಲ್ಲಿ ಅವರಿಗೆ ವ್ಯಾಪರ ಮಾಡಲು ಕಡಿಮೆ ಅವಕಾಶಗಳಿರಬಹುದು. ಬಹುಶಃ ಅನೇಕರಿಗೆ ಹಣದ ಸಹಾಯ ಬೇಕಾಗಿರಬಹುದು.[27] ಇದು ಪೂರ್ವ ಯೋಜಿತ ವಾಗಿರಲಿಲ್ಲ, ಆದರೆ ಹಾಗೆ ಬೆಳೆದು ಬಂದದ್ದಾಗಿತ್ತು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಕ್ರೈಸ್ತರ ಒಂದು ಗುಂಪು ಸೇರಿ ಬಂದು, "ಒಬ್ಬನು ತನ್ನ ಸಾಮರ್ಥ್ಯದ ಪ್ರಕಾರ ಕೊಡುತ್ತಿದ್ದನು ಮತ್ತು ತನ್ನ ಅವಶ್ಯಕತೆಗನುಗುಣವಾಗಿ ಪಡೆಯುತ್ತಿದ್ದನು ಎಂಬ ಒಂದು ಪರಿಪೂರ್ಣ ಸಮಾಜವನ್ನು" ಕಟ್ಟಲು ನಿರ್ಧರಿಸಲಿಲ್ಲ. ಯೆರೂಸಲೇಮಿನಲ್ಲಿನ ಪ್ರಾರಂಭದ ವರ್ಷಗಳಲ್ಲಿ ಈ ಪರಿಸ್ಥಿತಿಯು ವಿಶಿಷ್ಟವಾಗಿತ್ತು; ತದ ನಂತರದ ವರ್ಷಗಳಲ್ಲಿ ಈ ಪರಿಸ್ಥಿತಿಯು ಮತ್ತೆ ಪುನರಾವರ್ತನೆಗೊಳ್ಳಲಿಲ್ಲ. ಯೆರೂಸಲೇಮಿನಿಂದ ಸಭೆಯು ಚದುರಿಹೋದ ತರುವಾಯ, ಕೊರತೆಯಲ್ಲಿರುವ ಸಭೆಯವರಿಗೆ ಸಹಾಯ ಕೊಡುವದರ ಕುರಿತು ಕ್ರೈಸ್ತರು ಹೀಗೆ ಪ್ರತಿ ಕ್ರಿಯೆ ವ್ಯಕ್ತಪಡಿಸಿದ್ದು ಮತ್ತೆ ಎಲ್ಲಿಯೂ ನೋಡಲಿಲ್ಲ.

ಇಲ್ಲ ನಮಗೆ ಕಲಿಯಲು ಯಾವ ಪಾಠವಿಲ್ಲವೆಂದಲ್ಲ. ಅವರು ಮಾಡಿದ್ದರಿಂದ ನಾವು ಏನನ್ನೋ ಕಲಿಯಬೇಕೆಂದು ದೇವರು ಬಯಸುತ್ತಾನೆ ಎಂದು ಈ ವಿವರಣೆ ದಾಖಲಾಗಿರುವ *ಸಂಗತಿಯು* ಸ್ಪಷ್ಟಪಡಿಸುತ್ತದೆ: ನಮ್ಮ ಸಹೋದರನು ಕೊರತೆಯಲ್ಲಿದ್ದಾಗ,[28] *ನಾವು ಸಹಾಯ* ಮಾಡಲು ಸಿದ್ಧರಾಗಿರಬೇಕು - ನಮ್ಮದನ್ನು ಮಾರಲೂ ಸಹ ಸಿದ್ಧರಾಗಬೇಕು!

ವಚನ 44 ಮತ್ತೊಮ್ಮೆ ಗಮನಿಸಿರಿ: "ನಂಬಿದವರೆಲ್ಲರು ಒಟ್ಟಾಗಿದ್ದು ಮತ್ತು ತಮ್ಮದೆಲ್ಲವನ್ನು ಹುದುವಾಗಿ ಅನುಭವಿಸುತ್ತಿದ್ದರು." ಎಲ್ಲವನ್ನು "ಹುದುವಾಗಿ ಅನುಭವಿಸುತ್ತಿದ್ದರು" ಎಂದರೆ ಅವರು ತಕ್ಷಣವೇ ಎಲ್ಲವನ್ನು ಮಾರಿದರು ಮತ್ತು ಒಟ್ಟು ಸೇರಿಸಿದರು ಎಂದಲ್ಲ. ಅದರ ಅರ್ಥವೇನು? *ಇದು ಆದಿ* ಕ್ರೈಸ್ತರ ಮೂಲ ಭಾವನೆಯನ್ನು ವಿವರಿಸುತ್ತದೆ ಎಂದು ನಾನು ಸೂಚಿಸುತ್ತೇನೆ. ತಾವು ಹೊಂದಿದ್ದು ನಿಜವಾಗಿಯೂ ತಮಗೆ ಸಂಬಂಧಿಸಿಲ್ಲ ಆದರೆ ಅದೆಲ್ಲವೂ ದೇವರಿಗೆ ಸಂಬಂಧಿಸಿದ್ದು ಎಂದು ಅವರು ಅರ್ಥ ಮಾಡಿಕೊಂಡರು (ಕೀರ್ತನೆ 50:10-12); ಅವರು ದೇವರ ಸ್ವಾಸ್ತ್ಯದ *ಮನೆವಾರ್ತೆಯವರು* (1 ಕೊರಿಂಥ 4:2). ತಮ್ಮ ಸಹೋದರ ಮತ್ತು ಸಹೋದರಿಯರೊಂದಿಗೆ ಅವರು ಕ್ರಿಸ್ತನಲ್ಲಿ ಸಾಮಾನ್ಯ ಜೀವನ ಹೊಂದಿದ್ದರಿಂದ (ಅನ್ಯೋನ್ಯತೆ), ತಮ್ಮ ಆಸ್ತಿಯು ಸಾಮಾನ್ಯವಾದದ್ದು ಎಂದು ಅವರು ಆಲೋಚಿಸುವದು ಸಹಜ ವಾಗಿದೆ. ಅವರು ತಮ್ಮ ಅಸ್ತಿಯನ್ನು ಅವಶ್ಯಕತೆಗನುಗುಣವಾಗಿ ಉಪಯೋಗಿಸಲು ಅವರು ಸಿದ್ಧರಿದ್ದರು. ಅವರ ಸಹೋದರರಿಗೆ ಅವಶ್ಯಕತೆಯಿದ್ದದ್ದರಿಂದ, ಅವರು ತಮ್ಮ ಆಸ್ತಿಯನ್ನು (ಹೇಗೂ ಅದು ತಂದೆಗೆ ಸಂಬಂಧಿಸಿದ್ದುದರಿಂದ) ಮಾರಿದರು.

ಇದರ ಅನ್ವಯವು 1 ಯೋಹಾನ 3:17ರಲ್ಲಿದೆ. "ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ

ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಆವನಲ್ಲಿ ನೆಲೆಗೊಂಡಿರುವದುಂಟೇ?"[29] ಈ ಪ್ರಶ್ನೆಗೆ ಉತ್ತರವು ಸ್ಪಷ್ಟವಾಗಿದೆ: ನನ್ನ ಸಹೋದರನಿಗೆ ನಿಜವಾದ ಅವಶ್ಯಕತೆ ಇದ್ದರೆ ಮತ್ತು ಅವನಿಗೆ ಸಹಾಯ ಮಾಡಲು ನನ್ನಲ್ಲಿ ಸಾಮರ್ಥ್ಯವಿದ್ದಾಗ್ಯೂ ನಾನು ಮಾಡದಿದ್ದರೆ, ನನ್ನಲ್ಲಿ ದೇವರ ಪ್ರೀತಿ ನೆಲೆಗೊಂಡಿಲ್ಲ! ನಮ್ಮ ಸಹೋದರ ಮತ್ತು ಸಹೋದರಿಯರ ಕೊರತೆಗಳನ್ನು ಗಮನಿಸಲು ಸೂಕ್ಷ್ಮತೆಯನ್ನು ಮತ್ತು ಸಹಾಯ ಮಾಡಲು ಸಿದ್ಧರಾಗುವಂತೆ ದೇವರು ನಮಗೆ ಸಹಾಯ ಮಾಡಲಿ - ಅದಕ್ಕಾಗಿ ಸ್ವಂತ ತ್ಯಾಗವಾಬೇಕಾದರೂ ಸರಿ![30]

## ಒಂದು ಆನಂದದ ಸಭೆ (2:46, 47)

ವಚನಗಳು 46 ಮತ್ತು 47 ಈ ಆದಿ ಕ್ರೈಸ್ತ ಸಭೆಯ ಒಂದು ಅಲ್ಪ ಚಿತ್ರವನ್ನು ಕೊಡುತ್ತದೆ:

> "ಅವರು ದಿನಾಲು ಏಕಮನಸ್ಸಿನಿಂದ[31] ದೇವಾಲಯದಲ್ಲಿ ಕೂಡುತ್ತಾ ಮನೆಮನೆಗಳಲ್ಲಿ[32] ರೊಟ್ಟಿಮುರಿದು[33] ಉಲ್ಲಾಸದಿಂದಲೂ ಸರಳ ಹೃದಯದಿಂದಲೂ[34] ಊಟಮಾಡುತ್ತಾ ಇದ್ದರು; ದೇವರನ್ನು ಕೊಂಡಾಡುವವರಾಗಿಯೂ ಜನರೆಲ್ಲರ ದಯವನ್ನು ಹೊಂದುವವರಾಗಿಯೂ ಇದ್ದರು. ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು.

ನಾನು ಒಬ್ಬ ಚಿಕ್ಕ ಬಾಲಕನಾಗಿದ್ದಾಗಿನಿಂದ, "ರಕ್ಷಣೆ ಹೊಂದುವದಕ್ಕಾಗಿ ಬುಧವಾರ ರಾತ್ರಿಯೇ ಬರಬೇಕೋ?" ಎಂಬ ಪ್ರಶ್ನೆಗೆ ಇರುವ ಚರ್ಚೆಯನ್ನು ನಾನು ಕೇಳುತ್ತಲೇ ಇದ್ದೇನೆ.[35] ಆದಿ ಕ್ರೈಸ್ತರು ಈ ಪ್ರಶ್ನೆಯನ್ನು ಹಾಸ್ಯಾಸ್ಪದವಾಗಿ ಬಹುಶಃ ಕಾಣುತ್ತಿದ್ದರು. ಅವರು ತಮ್ಮ ಸಹ ಕ್ರೈಸ್ತರೊಂದಿಗೆ *ದಿನಾಲು* ಸೇರಿ ಬರುತ್ತಿದ್ದರು! ಅವರು ದಿನಾಲು ಆಲಯದಲ್ಲಿ ಸೇರಿ ಬರುತ್ತಿದ್ದರು, ಅವರೆಲ್ಲರು ಸೇರಿ ಬಂದು "ಅಪೊಸ್ತಲರ ಬೋಧನೆಯನ್ನು" ಕೇಳಲು ಇರುವ ಒಂದೇ ವಿಶಾಲವಾದ ಸ್ಥಳ ಅದಾಗಿತ್ತು (2:42).[36] ತಮ್ಮ ಸಹೋದರ ಸಹೋದರಿಯರೊಂದಿಗೆ ಪರಿಚಯ ಮಾಡಿಕೊಳ್ಳುತ್ತಾ, ಅಡುಗೆಯನ್ನು ಸವಿಯುತ್ತಾ ಇದ್ದರು.[37] ಅವರು ಇದನ್ನು ಮಾಡಲು *ಆನಂದ* ಪಡುತ್ತಿದ್ದರು: "ಅವರು *ಸರಳ ಹೃದಯದಿಂದ* ಊಟ ಮಾಡುತ್ತಾ ಇದ್ದರು. (ಒತ್ತಿ ಹೇಳಿದ್ದು ನನ್ನದು.) ಅವರು ದೇವರ ಕೃಪೆಯಿಂದ ನರಕದ ಬೆಂಕಿಯಿಂದ ತೆಗೆಯಲ್ಪಟ್ಟಿದ್ದರು; ಆನಂದವು ಇತರರೊಂದಿಗೆ ಅವರ ಹೃದಯವನ್ನು ತುಂಬಿತ್ತು! ಅದೇ ಆನಂದದಿಂದ ತುಂಬಿದ ಇತರರೊಂದಿಗೆ ಅವರು ಅನ್ಯೋನ್ಯವಾಗಿರುವದು ಸಹಜವಾಗಿತ್ತು; ಇಲ್ಲವಾದರೆ ಅದು ಅಸಹಜವಾಗಿತ್ತು. (ಅವರು ಒಬ್ಬರನೊಬ್ಬರು ಸಹಿಸಿದ್ದು ಮಾತ್ರವಲ್ಲ ಆನಂದಿಸಿದರು!)

ನಮ್ಮ ಅನೇಕರು ಬಹುಕಾಲದ ವರೆಗೆ ಕ್ರೈಸ್ತರಾಗಿದ್ದು, ನಮ್ಮ ಪಾಪಗಳಿಂದ ಬಿಡುಗಡೆ ಹೊಂದಿದ್ದರ ಉತ್ಸಾಹವನ್ನು ಮರೆತು ಬಿಟ್ಟಿದ್ದೇವೆ (2 ಪೇತ್ರ 1:9) ಮತ್ತು ಸಂತೋಷದ ಆ ವಿಶೇಷ ಅನುಭವವನ್ನು ಕಳಕೊಂಡಿದ್ದೇವೆ. "ನಾವು ದಾವೀದನೊಂದಿಗೆ ಹೀಗೆ ಪ್ರಾರ್ಥಿಸಬೇಕು, ರಕ್ಷಣಾ*ನಂದವನ್ನು* ನನ್ನಲ್ಲಿ ಪುನಃ ಹುಟ್ಟಿಸು" (ಕೀರ್ತನೆ 51:12; ಒತ್ತಿ ಹೇಳಿದ್ದು ನನ್ನದು)!

## ಹಂಚಿಕೊಳ್ಳುವ ಸಭೆ (2:46, 47)

ಈ ಆದಿ ಕ್ರೈಸ್ತರನ್ನು ವಿಶಿಷ್ಟಗೊಳಿಸಿದ ಅನ್ಯೋನ್ಯತೆ ಮತ್ತು ಉತ್ಸಾಹ ಗಮನಿಸದೇ ಹೋಗುವದಿಲ್ಲ. "ನಿಮ್ಮಲ್ಲಿ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು" (ಯೋಹಾನ 13:35). ಅಧ್ಯಾಯ 2ರ ಕೊನೆಯ ಮಾತುಗಳನ್ನು ಓದಲು ಆಶ್ಚರ್ಯ ಪಡಬೇಕಾಗಿಲ್ಲ: "... ಜನರೆಲ್ಲರ ದಯೆಯನ್ನು

ಹೊಂದುವವರಾಗಿಯೂ ಇದ್ದರೂ. ಮತ್ತು ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು" (2:46, 47). "ದಿನಾಲು" ಎನ್ನುವ ಪದವು, ಕ್ರೈಸ್ತರು ಒಂದು ಮನಸ್ಸಿನಿಂದ ಮುಂದುವರಿದದ್ದು (2:46) ಮತ್ತು ಜನರು ದಿನಾಲು ಅವರ ಮಂಡಲಿಗೆ ಸೇರುತ್ತಿದ್ದುದು (2:47), ಎರಡಕ್ಕೂ ಉಪಯೋಗಿಸಲ್ಪಟ್ಟದ್ದು ಕಾಕತಾಳೀಯವಲ್ಲ. ಕರ್ತನೊಂದಿಗೆ ಮತ್ತು ಒಬ್ಬರಿಗೊಬ್ಬರು ಮಹತ್ವದ ಸಂಬಂಧವಿಟ್ಟುಕೊಂಡ ಕ್ರೈಸ್ತರು ಜನರನ್ನು ಆಕರ್ಷಿಸುತ್ತಾರೆ!

ಇಂದು "ಸಭೆಯನ್ನು ಅಭಿವೃದ್ಧಿಗೊಳಿಸುವದು ಹೇಗೆ" ಎಂದು ವೇದಿಕೆಗಳಿಂದ, ಪೀಠದಿಂದ ಅನೇಕ ಮಾತುಗಳು ಬಲವಾಗಿ ಬರುತ್ತಿವೆ. ದೇವರಿಗೆ - ಇಷ್ಟವಾಗುವ ಸಭೆಯನ್ನು ಬೆಳೆಸುವದು[38] ಹೇಗೆ ಎಂದು ತಿಳುಕೊಳ್ಳಬೇಕಾದರೆ, ಅಪೊಸ್ತಲರ ಕೃತ್ಯಗಳು 2:42-47ರಲ್ಲಿ ತರಬೇತಿ ಹೊಂದುವದು ಅಗತ್ಯ!

## ಮುಕ್ತಾಯ

ಅಪೊಸ್ತಲರ ಕೃತ್ಯಗಳು 2:42-47ರಲ್ಲಿ ನಮೂದಿಸಿದ ಸಭೆಯ ಒಂದು ಭಾಗವಾಗುವದು ಎಷ್ಟು ಆನಂದಕರವಾಗಿದೆಯಲ್ಲವೇ? ನೀವು ನಿಮ್ಮ ತಲೆಯನ್ನು ಅಷ್ಟು ಬಲವಾಗಿ ಅಲುಗಾಡಿಸುವ ಮೊದಲು ನಾನೊಂದು ಮಾತನ್ನು ಸೇರಿಸಲು ಬಯಸುತ್ತೇನೆ: ನಾವೆಲ್ಲರೂ ಆರಾಧಿಸುವವರು, ಭಕ್ತಿಯುಳ್ಳವರೂ ಮತ್ತು ನಿಸ್ವಾರ್ಥಿಗಳೂ, ಆನಂದವಾಗಿದ್ದು ಹಂಚಿಕೊಳ್ಳುವವರೂ ಆದಾಗಲೇ ಅಂಥ ಸಭೆಯ ಒಂದು ಭಾಗವಾಗಲು ಸಾಧ್ಯಾ. ಸತ್ಯವೇದವು ಒಂದು ಕನ್ನಡಿಯಾಗಿದ್ದು ನಮ್ಮನ್ನು ನಾವು ನೋಡಿಕೊಳ್ಳಲು ಸಹಾಯ ಮಾಡುತ್ತದೆ, ಅದು ಬೇರೆಯವರನ್ನು ಪರೀಕ್ಷಿಸುವದಕ್ಕಾಗಿ ಇರುವ ಒಂದು ಭೂತ ಕನ್ನಡಿಯಲ್ಲ. "ನಾನು ಸದಸ್ಯನಾಗಲು ಬಯಸುವ ಸಭೆಯಲ್ಲಿ" ಸರಿ ಹೊಂದುವ ಕ್ರೈಸ್ತನಾಗುವಂತೆ ದೇವರು ನನಗೆ ಸಹಾಯ ಮಾಡಲಿ.

ನಾವು ಅಪೊಸ್ತಲರ ಕೃತ್ಯಗಳು 2ರ ಅಧ್ಯಯನವನ್ನು ಪ್ರಾರಂಭಿಸಿದಾಗ, "ಸತ್ಯವೇದದಲ್ಲಿನ ಕೆಲವು ಅಧ್ಯಾಯಗಳು ಎಷ್ಟು ಮಹತ್ತಾಗಿದೆ ಎಂದರೆ ಅದನ್ನು ವ್ಯಕ್ತಪಡಿಸುವ ನಮ್ಮ ಸಾಮರ್ಥ್ಯವನ್ನು ಅದು ಸುಳ್ಳಾಗಿಸುತ್ತದೆ" ಎಂದು ನಾನು ಸೂಚಿಸಿದ್ದೆನು. ಅಪೊಸ್ತಲರ ಕೃತ್ಯಗಳು 2 ಅಂಥ ಅಧ್ಯಾಯವಾಗಿದೆ. ಈ ಅಧ್ಯಾಯದಲ್ಲಿನ ಸತ್ಯಗಳನ್ನು ನಿಮ್ಮ ಮುಂದೆ ಬಯಲುಮಾಡಿದ್ದೇನೆ, ಆದರೆ ನಾವು ಈಗ ಅಂತ್ಯಕ್ಕೆ ಬಂದಿರುವಾಗ, ವಾಕ್ಯದ ಬಹು ಪ್ರಾಮುಖ್ಯವಾದ ಈ ಭಾಗದಲ್ಲಿನ ಎಲ್ಲಾ ವಿಷಯಗಳನ್ನು ನಾನು ಕೇವಲ ಅಲ್ಪವಾಗಿ ವಿವರಿಸಿದ್ದೇನೆಂದು ಒಪ್ಪಿಕೊಳ್ಳುತ್ತೇನೆ. ನಮ್ಮ ಜೀವಿತದ ಎಲ್ಲಾ ದಿನಗಳಲ್ಲಿ, ಈ ಅಧ್ಯಾಯವನ್ನು ಅಧ್ಯಯನ ಮಾಡುತ್ತಾ ನಾವೆಲ್ಲರೂ ಲಾಭ ಪಡೆಯಬಹುದು.

ಅಪೊಸ್ತಲರ ಕೃತ್ಯಗಳು 2ರ ಮೇಲಿನ ಪಾಠಗಳ ಕುರಿತು ಒಂದು ನಿರೀಕ್ಷೆಯಿರುವದಾದರೆ ಅದು ಯೇಸು ಕ್ರಿಸ್ತನನ್ನು ಪ್ರಕಟಪಡಿಸಿದ್ದು (ಗಲಾತ್ಯ 3:1). ಯೇಸು ಕ್ರಿಸ್ತನು ಕ್ರೂಜಿತನಾದದ್ದನ್ನು, ಪುರನುತ್ಥಾನವಾದದ್ದನ್ನು ಮತ್ತು ದೇವರ ಬಲಗಡೆ ಆಸೀನನಾದದ್ದನ್ನು; ನಂತರ ಯೇಸು ಕ್ರಿಸ್ತನನ್ನು ನಂಬಿ ವಿಧೇಯರಾದ ಮೂರು ಸಾವಿರ ಜನರನ್ನು; ಮತ್ತು ಅಂತ್ಯದಲ್ಲಿ ಯೇಸು ಕ್ರಿಸ್ತನು ಆದಿ ಕ್ರೈಸ್ತರ ಜೀವಿತದಲ್ಲಿ ಪ್ರಕಟವಾದದ್ದನ್ನು ನಾವು ನೋಡಿದ್ದೇವೆ. ನಮ್ಮ ಜೀವಿತದಲ್ಲಿ ಪ್ರಕಟವಾದದ್ದನ್ನು ನಾವು ನೋಡಿದ್ದೇವೆ. ನಮ್ಮ ಜೀವಿತದ ಪ್ರತಿಯೊಂದು ದಿನವೂ ಯೇಸುವನ್ನು ಉನ್ನತ ಪಡಿಸುವಂತೆ ದೇವರು ಸಹಾಯಮಾಡಲಿ.

## ಪ್ರಸಂಗದ ಟಿಪ್ಪಣಿ

ನಾನು ಯಾವಾಗಲೂ ಅಪೊಸ್ತಲರ ಕೃತ್ಯಗಳು 2ನ್ನು, "ಹೇಗೆ ಶ್ರೇಷ್ಠವಾದ ಕೂಟಗಳನ್ನು

ನಡೆಸಬಹುದು" ಎಂಬ ಪ್ರಸಂಗವನ್ನು ಸುವಾರ್ತಾ ಕೂಟಗಳಿಗೆ ಸಿದ್ಧ ಮಾಡಲು ಉಪಯೋಗಿಸಿದ್ದೇನೆ. ಒಂದು ಶ್ರೇಷ್ಠವಾದ ಕೂಟವನ್ನು ನಡೆಸಲು ನಿಮಗೆ ಬೇಕಾದದ್ದು, (1) ಶ್ರೇಷ್ಠ ಸಿದ್ಧತೆ (ಅಪೊಸ್ತಲರ ಕೃತ್ಯಗಳು 1 ಇಲ್ಲಿ ನಾನು ಪುನಃ ನೆನಪಿಸುತ್ತೇನೆ); (2) ದೊಡ್ಡ ಪ್ರಚಾರ (ದೇವರು ಸರ್ವರ ಗಮನ ಸೆಳೆದನು!); (3) ಅದ್ಭುತ ಪ್ರಸಂಗ (ಯೇಸುವಿನ ಕುರಿತು ಪೇತ್ರನು ಮಾಡಿದಂತೆ ಪ್ರಸಂಗಿಸುವದು); (4) ಶ್ರೇಷ್ಠ ತಿಳುವಳಿಕೆ/ಅರ್ಥ ಮಾಡಿಕೊಳ್ಳುವಿಕೆ (ಉತ್ತಮ ಪರಿಣಾಮಕ್ಕೆ ಯಥಾರ್ಥವಾಗಿ ಕೇಳುವವರು ಬೇಕು). (ನೀವು "ಒಂದು ಉತ್ತಮ ಪರಿಣಾಮ" ಎಂಬ ಅದೇ ಪದವನ್ನು ಉಪಯೋಗಿಸಬಹುದು.) ನಾವು ಇಲ್ಲಿಯ ವರೆಗೆ ಕೂಟಗಳಿಗೆ ಸಿದ್ಧರಾಗಲು ಏನು ಮಾಡಿದ್ದೇವೆ ಮತ್ತು ಇನ್ನು ಏನು ಮಾಡಿದ್ದೇವೆ ಮತ್ತು ಇನ್ನು ಏನು ಮಾಡುವದು ಉಳಿದಿದೆ ಎಂದು ಈ ಪ್ರತಿಯೊಂದು ಅಂಶವು ನಾನು ಮಾತಾಡಲು ಸಂಧರ್ಭವನ್ನು ನನಗೆ ಕೊಟ್ಟಿದೆ.

ಆದಿ ಕ್ರೈಸ್ತ ಸಭೆಯು ಎಲ್ಲವನ್ನು ಸಾಮಾನ್ಯವಾಗಿ ಹೊಂದಿತ್ತು ಎಂದು ನಾವು ಒಂದು ಅಮೂಲ್ಯ ಪಾಠವನ್ನು ಸಿದ್ಧಮಾಡಬಹುದು. ಅದು ಸುಳ್ಳು ಪಂಥಗಳ ನಾಯಕರಿಂದ 2:44, 45ರ ತಪ್ಪಾದ ಉಪಯೋಗವನ್ನು ಹೊಡೆದುಹಾಕುತ್ತದೆ ಮತ್ತು ಸಭೆಯು ಕೊರತೆಯಲ್ಲಿರುವ ಕ್ರೈಸ್ತರಿಗೆ ನಿಸ್ವಾರ್ಥವಾಗಿ ಸಹಾಯ ಮಾಡಬೇಕೆಂದು ಹೇಳಿಕೊಡುತ್ತದೆ. ಇದು 2:44, 45ರಿಂದ ಪ್ರಾರಂಭವಾಗಿ, 4:32-35ರ ವರೆಗೆ ಹೋಗುತ್ತದೆ.

"ಪ್ರತಿದಿನವೂ" ಎಂಬ ವಾಕ್ಯವು 2:46, 47ರಲ್ಲಿ ಉಪಯೋಗಿಸಲಾಗಿದೆ. ಇದು "ಪ್ರತಿದಿನದ ಧರ್ಮ" ಎಂಬ ಪ್ರಸಂಗಕ್ಕೆ ಬುನಾದಿಯಾಗುತ್ತದೆ: ಅವರು ಪ್ರತಿದಿನ ಭೇಟಿಯಾದರು (2:46), ಶಾಸ್ತ್ರಗಳನ್ನು ಪ್ರತಿದಿನ ಹುಡುಕಿದರು (17:11), ಪ್ರತಿದಿನವೂ ಪ್ರಾರಂಭಿಸಿದರು (6:1), ಪ್ರತಿ ದಿನ ಆತ್ಮಗಳನ್ನು ಗೆದ್ದುಕೊಂಡರು (2:47), ಮತ್ತು ಪ್ರತಿ ದಿನ ಸಂಖ್ಯೆಯಲ್ಲಿ ಬೆಳೆ ದರು (2:47; 16:5).

---

ಟಿಪ್ಪಣಿಗಳು

[1]ವಚನ 42, ವಚನ 41ರ ಒಂದೇ ಪರಿಚ್ಛೇದದ ಭಾಗವಾಗಿದೆ; ಅಂದರೆ, ಅದು ವಚನ 41ರ ವಿಚಾರವನ್ನು ಮುಂದರಿಸುತ್ತದೆ. [2]KJVಯಲ್ಲಿ "ಅಪೊಸ್ತಲರ ತತ್ವ" ಇದೆ. "ತತ್ವ" ಈ ಪದಕ್ಕೆ ಗ್ರೀಕ ಭಾಶಾಂತರವು "ಬೋಧನೆ" ಎಂದಿದೆ, "ತತ್ವಗಳಾಗಿರಬಹುದು" ಅಥವಾ "ಪ್ರಾಯೋಗಿಕವಾಗಿರಬಹುದು." [3]ಹೊಸ ಒಡಂಬಡಿಕೆಯ ಕೊನೆಯ ಪುಸ್ತಕವು ಸುಮಾರು ಆರವತ್ತು ವರ್ಷಗಳ ತರುವಾಯ ಸಂಪೂರ್ಣಗೊಂಡಿತು. [4]ಇದರ ಪರಿಣಾಮವೇನೆಂದರೆ, ಕೇವಲ ಅಪೊಸ್ತಲರು ಮಾತ್ರ ಬೋಧಿಸುತ್ತಿದ್ದರು. ಅಪೊಸ್ತಲರು ಮಾತ್ರ ಪರಿಶುದ್ಧಾತ್ಮನ ಸ್ನಾನವನ್ನು ಹೊಂದಿದರೆಂದು ಇನ್ನೊಂದು ಪುರಾವೆ. [5]"ಅಪೊಸ್ತಲರ ಬೋಧನೆಗೆ ತಮ್ಮನ್ನು ನಿರತರನ್ನಾಗಿಸಿಕೊಂಡರು" ಎಂಬ ವಾಕ್ಯವು, ಅಪೊಸ್ತಲರು ತಮಗೇನು ಮಾಡಲು ಹೇಳಿದರೋ ಅದನ್ನು ಮಾಡಲು ಅವರು ಉತ್ಸುಕರಾಗಿದ್ದರು ಎಂಬುದನ್ನು ಸೂಚಿಸುತ್ತದೆ. ಅಧ್ಯಾಯದ ಉಳಿದ ಭಾಗಗಳಲ್ಲಿ ಮಾಡುವದರ ಕುರಿತು ಒತ್ತಾಯವಿರುವದರಿಂದ, ನಾನು ಕಲಿಯುವದನ್ನು ಈ ಹಂತದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. [6]Lewis Foster, comments on Acts, *The NIV Study Bible* (Grand Rapids, Mich.: Zondervan Publishing House, 1985), 1648. [7]ಗಲಾತ್ಯ 6:6; ಇಬ್ರಿಯ 13:16 (NASB). 2 ಕೊರಿಂಥ 8:23 ಮತ್ತು ಫಿಲೆಮೋನ 17 (NASB)ರಲ್ಲಿ ಅದಕ್ಕೆ ಸಂಬಂಧಿಸಿದ ಪದವನ್ನು "ಜೊತೆಗಾರ" ಎಂದು ಭಾಷಾಂತರಮಾಡಲಾಗಿದೆ. [8]1 ಯೋಹಾನ 1:3; 1 ಕೊರಿಂಥ 1:9; 2 ಕೊರಿಂಥ 13:14. [9]ಈ ಭಾಗವೇ ನಾವು ಕರ್ತನ ಭೋಜನವನ್ನು ಸೂಚಿಸುವದಕ್ಕೆ ಉಪಯೋಗಿಸುತ್ತೇವೆ. NASB ಈ ಪದವನ್ನು "ಹಂಚಿಕೊಳ್ಳುವದು" ಎನ್ನುತ್ತದೆ. [10]ಸಾಮಾನ್ಯ ಊಟವನ್ನು ಹಂಚಿಕೊಳ್ಳುವದನ್ನು ಕ್ರಿಸ್ತನಲ್ಲಿನ ನಮ್ಮ ಅನ್ಯೋನ್ಯತೆಯನ್ನು ವ್ಯಕ್ತಮಾಡುತ್ತದೆ (ಅಪೊಸ್ತಲರ ಕೃತ್ಯಗಳು 2:46). ಒಬ್ಬ ಸಹೋದರನೊಂದಿಗೆ ಅನ್ಯೋನ್ಯತೆಯನ್ನು ನಾನು ಕಡಿದುಕೊಳ್ಳುವಾಗ ಅವನೊಂದಿಗೆ ಅನ್ಯೋನ್ಯತೆಯನ್ನು ನಾನು ಕಡಿದುಕೊಳ್ಳುವಾಗ ಅವನೊಂದಿಗೆ ಊಟ ಮಾಡಬಾರದೆಂದು

ತಿಳಿಸಲಾಗಿದೆ (1 ಕೊರಿಂಥ 5:11). ಸಭೆಯ ಸದಸ್ಯರು ಒಟ್ಟಾಗಿ ಊಟಮಾಡುವದನ್ನು ಅನ್ಯೋನ್ಯತೆ ಎಂದು ಕರೆಯುವಾಗ, ಪದವು ತಪ್ಪಾಗಿ ಉಪಯೋಗಿಸಲ್ಪಟ್ಟಿಲ್ಲ. ದುರದೃಷ್ಟಕರವಾಗಿ, ಕೆಲ ಸಭೆಗಳಲ್ಲಿ, "ಅನ್ಯೋನ್ಯತೆ" ಎಂಬ ಪದವು ಅಂಥ ಸಂದರ್ಭಗಳನ್ನು ಸೂಚಿಸುತ್ತವೆ. ಇದು ಸರಿಯಲ್ಲ.

[11]Living Oracles translation, The Twentieth Century New Testament. [12]ರೊಟ್ಟಿ ಮುರಿಯುವದನ್ನು ಕರ್ತನ ಭೋಜನಕ್ಕೆ ಸೂಚಿಸಿರುವಾಗ, ಇದನ್ನು ಕೆಲವರು, ಅವರ ಸಭಿಕರು ಕೇವಲ ರೊಟ್ಟಿಯಲ್ಲಿ ಪಾಲು ತೆಗೆದುಕೊಳ್ಳಬೇಕು (ಸಭಾಪಾಲಕರು ದ್ರಾಕ್ಷಾರಸ ತೆಗೆದುಕೊಳ್ಳುವರು) ಎನ್ನುತ್ತಾರೆ. ಕರ್ತನ ಭೋಜನದಲ್ಲಿ ರೊಟ್ಟಿ ಮಾತ್ರವಿರುವದಿಲ್ಲ ಎಂದು ಈ ವಾಕ್ಯ ಸಾಧಿಸುವದಲ್ಲಿ. ಹಾಗೆಯೇ ಈ ವಾಕ್ಯವು ಸಾಮಾನ್ಯ ಊಟದಲ್ಲಿ ಅವರು ಕೇವಲ ರೊಟ್ಟಿಯನ್ನೇ ತಿಂದರು ಎಂದೂ ಸಾಧಿಸುವದಿಲ್ಲ. ಇಲ್ಲಿ ಸಾಮಾನ್ಯ ಅಲಂಕಾರ ಉಪಯೋಗಿಸಲಾಗಿದೆ, ಒಂದು ಸಂಪೂರ್ಣ ಕಾರ್ಯಕ್ಕೆ ಒಂದು ತತ್ವ ತೆಗೆದುಕೊಳ್ಳಲಾಗಿದೆ. ಯೇಸು ಆಜ್ಞೆ ಕೊಟ್ಟ ಪ್ರಕಾರ ನಾವು ಹುಳಿಯಿಲ್ಲದ ರೊಟ್ಟಿಯಲ್ಲಿ ಮತ್ತು ದ್ರಾಕ್ಷಾರಸ ಪಾನದಲ್ಲಿ ಪಾಲು ತೆಗೆದುಕೊಳ್ಳಬೇಕು (1 ಕೊರಿಂಥ 11:23-26). [13]ಕೇಳುವದು ಮತ್ತು ಪ್ರಾರ್ಥಿಸುವದು ಎರಡು ಆರಾಧನೆಯನ್ನು ಸೂಚಿಸುತ್ತದೆ. [14]ಅಪೊಸ್ತಲರ ಕೃತ್ಯಗಳು 20:7ರ ಮೇಲಿನ ಟಿಪ್ಪಣಿಯನ್ನು ನೋಡಿರಿ, ಈ ಪುಸ್ತಕದಲ್ಲಿ ಅದು ನಂತರ ಬರುತ್ತದೆ. [15]ವಚನ 43 ಒಂದು ಹೊಸ ಪರಿಚ್ಛೇದದಿಂದ ಪ್ರಾರಂಭವಾಗಿ, 47ನೇ ವಚನದ ವರೆಗೆ ಮುಂದರಿಯುತ್ತದೆ. [16]KJVಯಲ್ಲಿ "ಭಯ" ಎಂದಿದೆ, ಮೂಲ ಭಾಗದ ಅಕ್ಷರಶಃ ತರ್ಜುಮೆ. ಆದರೆ, "ಭಯ" ಇಲ್ಲಿ ಅದನ್ನು ಗೌರವದ ಅಥವಾ ಭಕ್ತಿಯ ಭಾವನೆಯನ್ನು ವ್ಯಕ್ತ ಪಡಿಸುವದಕ್ಕೆ ಉಪಯೋಗಿಸಲಾಗಿದೆ. [17]ಅಪೊಸ್ತಲರು ಮಾತ್ರ ಈ ಸಮಯದಲ್ಲಿ ಅದ್ಭುತ ಕಾರ್ಯಗಳನ್ನು ಮಾಡಿದ್ದಾರೆಂದು ಹೇಳ ಲಾಗಿದೆ. ಅಲ್ಲಿಯವರೆಗೆ ಯಾರಿಗೂ ಆ ಶಕ್ತಿಯಿರಲಿಲ್ಲ. [18]ಈ ಪುಸ್ತಕದ ಮೊದಲ ಭಾಗದಲ್ಲಿ ಕಂಡು ಬಂದ 2:22ರ ಚರ್ಚೆಯನ್ನು ನೋಡಿರಿ. [19]ಅಸ್ವಸ್ತತೆಯಲ್ಲಿದ್ದವರನ್ನು ಗುಣಪಡಿಸಿದ್ದು (ಅಧ್ಯಾಯ 3 ಮತ್ತು 5), ದೆವ್ವಗಳನ್ನು ಬಿಡಿಸಿದ್ದು (5:16), ಸತ್ತವರನ್ನು ಎಬ್ಬಿಸಿದ್ದಿ (9:36-41)! [20]ಹಿಂದೆ ಅನೇಕ ಅಂಥ ಪ್ರಯತ್ನಗಳನ್ನು ಮಾಡಲಾಗಿದೆ. ಎಲ್ಲವೂ ವಿಫಲವಾಗಿವೆ.

[21]KJVಯಲ್ಲಿ ವಚನ 45 ಭೂತಕಾಲದಲ್ಲಿ ಉಪಯೋಗಿಸಲ್ಪಟ್ಟಿರುವದು, ಆ ವಿಚಾರವನ್ನು ಇನ್ನೂ ಹೆಚ್ಚು ಅನುಮೋದಿಸುತ್ತದೆ: "ತಮ್ಮ ಚರಸ್ಥಿರ ಸೊತ್ತನ್ನು ಮಾರಿ ಅಗತ್ಯವಿದ್ದವರಿಗೆಲ್ಲ ಹಂಚಿದರು." ಮೂಲ ಭಾಗದಲ್ಲಿ ಭೂತಕಾಲದ ಸೂಚನೆಯಿಲ್ಲ, ಆದರೆ ಅಲ್ಲಿ ಅದು ಅಷ್ಟು ಸ್ಪಷ್ಟವಾಗಿಲ್ಲ, ಅದು ಹಿಂದೆ ನಡೆದ ಕಾರ್ಯ ಮುಂದುವರಿದದ್ದವನ್ನು ತೋರಿಸುತ್ತದೆ. [22]NASBಯಲ್ಲಿ "ಪ್ರಾರಂಭವಾಯಿತು" ಎಂಬ ಪದವನ್ನು ಒತ್ತಿಹೇಳಲಾಗಿದೆ. ಅದು ಭಾಷಾಂತರಕಾರರಿಂದ ಕೊಡಲ್ಪಟ್ಟಿದೆ ಎಂದು ಸೂಚಿಸುತ್ತದೆ. [23]ಬಹುಶಃ ಅವರು ಬಾರ್ನಬನಿಗೆ ದೊರೆತ ಮನ್ನಣೆ ತಮಗೂ ದೊರೆಯಬೇಕೆಂಬ ಬಯಕೆ ಇರಬಹುದು. [24]ಒಬ್ಬ ಐಶ್ವರ್ಯವಂತ ಯೌವನಸ್ಥ ಅಧಿಕಾರಿಗೆ ಯೇಸು ಎಲ್ಲವನ್ನು ಮಾರಿ ಬಡವರಿಗೆ ಕೊಡಲು ಹೇಳಿ ತನ್ನನ್ನು ಹಿಂಬಾಲಿಸಲು ಹೇಳಿದನು (ಲೂಕ 18:18-25). ಇದು ಒಬ್ಬ ವಿಶೇಷ ಯೌವನಸ್ಥನಿಗೆ, ಒಂದು ವಿಶೇಷ ಸವಾಲಾಗಿತ್ತು ಮತ್ತು ಕ್ರಿಸ್ತನ ಎಲ್ಲಾ ಹಿಂಬಾಲಕರಿಗೆ ಕೊಟ್ಟದ್ದಾಗಿರಲಿಲ್ಲ. ಒಂದು ಪಂಥದ ನಾಯಕನು ತನ್ನ ಹಿಂಬಾಲಕರಿಗೆ ಎಲ್ಲವನ್ನು ತನಗೆ ಕೊಡಬೇಕೆಂದು ಒತ್ತಯಿಸುವದಾದರೆ, ನಾನು ಹೇಳುವದೇನೆಂದರೆ, ಯೇಸು ಮಾರಿದ್ದೆಲ್ಲವನ್ನು ಬಡವರಿಗೆ ಕೊಡುವದಕ್ಕೆ ಹೇಳಿದನೇ, ಹೊರತು ತನಗಲ್ಲ! [25]James Burton Coffman, *Commentary on Acts* (Austin, Tex.: Firm Foundation Publishing House, 1976), 63. [26]ಹೆಚ್ಚಾದ ಹೊಸ ಕ್ರೈಸ್ತರು ಯೆರೂಸಲೇಮಿನಲ್ಲಿಯೇ ಉಳಿದು ಕೊಂಡರು ಯಾಕೆಂದರೆ, ಸೌಲನು ಸಭೆಯನ್ನು ಹಿಂಸಿಸುವದರ ಮೂಲಕ ಸುವಾರ್ತೆಯು ಚದುರಿಸದ ಹೊರತು ಅಪೊಸ್ತಲರ ಕೃತ್ಯಗಳು 8:1-4ರ ಪ್ರಕಾರ ಸುವಾರ್ತೆಯು ಹೊರ ಪ್ರದೇಶಗಳಿಗೆ ಹರಡಲಿಲ್ಲ. [27]ಇದರ ನಂತರದ ಅಧ್ಯಾಯಗಳಲ್ಲಿ, ಕೇವಲ "ಎರಡು" ಅವಶ್ಯಕತೆ ಇದ್ದ ಗುಂಪುಗಳನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ: ತಮ್ಮ ಸಮಯವನ್ನು ಉಪದೇಶಿ ಸುವದರಲ್ಲಿಯೂ ಮತ್ತು ಬೋಧಿಸುವದರಲ್ಲಿಯು ಅಪೊಸ್ತಲರು ಸಮಯ ಕಳೆದದ್ದರಿಂದ ಅವರ ಬಳಿ ಹಣವಿರಲಿಲ್ಲ (ಅಪೊಸ್ತಲರ ಕೃತ್ಯಗಳು 3:6ಎ). ಮತ್ತು ವಿಧವೆಯರು (ಅಪೊಸ್ತಲರ ಕೃತ್ಯಗಳು 6:1). ಇತರರಿಗೂ ಅವಶ್ಯಕತೆಯಿತ್ತು ಎಂದು ನಾವು ಹೇಳಬಹುದು (ಅಪೊಸ್ತಲರ ಕೃತ್ಯಗಳು 11:29). [28]ವಾಕ್ಯ ಭಾಗದಲ್ಲಿ "ಕೊರತೆ" ಎಂದಿಲ್ಲ ಬದಲಾಗಿ "ಅವಶ್ಯಕತೆ" ಎಂದಿದೆ. ಒಬ್ಬ ಸಹೋದರನ ಮೂಲ ಅವಶ್ಯಕತೆಗಳಿಗೆ ಸಹಾಯ ಮಾಡುವದು ನನ್ನ ಜವಾಬ್ದಾರಿಯಾಗಿದೆ (ಒಂದು ಅಳತೆಯ ಒಳಗಡೆ). ಅವನಿಗೆ ಎಲ್ಲವೂ ದೊರಕಬೇಕೆಂದು ಖಚಿತ ಮಾಡುವದು ನನ್ನ ಒವಾಬ್ದಾರಿಯಲ್ಲ. [29]ಇನ್ನೊಂದು ಅನ್ವಯವಾಗುವಂಥ ವಾಕ್ಯ ಭಾಗವು ಗಲಾತ್ಯ 6:10: "ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ." [30]ಅಪೊಸ್ತಲರ ಕೃತ್ಯಗಳು 2:44, 45ರಲ್ಲಿ ಅಡಕವಾಗಿರುವ ಮತ್ತು 1 ಯೋಹಾನ 3:17 ಅವಶ್ಯವಾಗಿ ವ್ಯಕ್ತವಾಗಿರುವ

ತತ್ವ: ನಮ್ಮ ಸಹೋದರರನ ಅವಶ್ಯಕತೆಗೆ ನಾವು ಸ್ಪಂದಿಸುವದು ಅಗತ್ಯ, ಅದರೆ ಅದು ಅವನನ್ನು ಸೋಮಾರಿತನಕ್ಕೆ ಉತ್ತೇಜನಗೊಳಿಸಬಾರದು (ಹೋಲಿಸು 2 ಥೆಸಲೊನೀಕ 3:10).

[31]ಲೂಕನ ಅನೇಕ ವಾಕ್ಯಭಾಗಗಳ ದಾಖಲೆಗಳಲ್ಲಿ, ಸಭೆಯನ್ನು ಗುರುತಿಸುವ ಐಕ್ಯತೆಯ ಮನಸ್ಸನ್ನು ವ್ಯಕ್ತ ಮಾಡುವ ವಾಕ್ಯಗಳಲ್ಲಿ ಇದು ಒಂದಾಗಿದೆ. ಈ ಗುಣವನ್ನು ನಾವು ಅಳವಡಿಸಿಕೊಳ್ಳ ಬೇಕು. [32]ಆದಿ ಸಭೆಯು ವಿಧ ವಿಧವಾದ ಸ್ಥಳಗಳಲ್ಲಿ ಭೇಟಿಯಾಗುತ್ತಿದ್ದರು, ಸಾರ್ವಜನಿಕ ಆರಾ ಧನಾ ಸ್ಥಳಗಳನ್ನೊಳಗೊಂಡು (ಉದಾಹರಣೆ ಆಲಯ) ಮತ್ತು ಪ್ರತ್ಯೇಕ ಮನೆಗಳು (ರೋಮ 16:5; 1 ಕೊರಿಂಥ 16:19; ಕೊಲೋಸ್ಸೆ 4:15; ಫಿಲೆಮೋನ 2). ಅನೇಕ ವರ್ಷಗಳ ನಂತರ ಅವರು ಆರಾಧಿಸುವದಕ್ಕೆ ಕಟ್ಟಡಗಳನ್ನು ಕಟ್ಟಿದರು. ಒಂದು "ಸಭಾ ಕಟ್ಟಡವು" ಬಹು ಪ್ರಾಮುಖ್ಯ ಸಾಧನವಾ ಗಬಹುದು, ಆದರೆ ಕರ್ತನ ಕೆಲಸಕ್ಕೆ ಅದು ಇರದಿದ್ದರೆ ಅಸಾಧ್ಯವಾದ ಎಂದು ನಾವು ಆಲೋಚಿಸ ಬಾರದು. [33]KJVಯಲ್ಲಿ "ಮಾಂಸ" ಎಂದಿದೆ, ಆದರೆ ಇದು "ಪ್ರಾಣಿಗಳ ಮಾಂಸ" ಎಂದಲ್ಲ. ಆಂಗ್ಲ ಪದದಲ್ಲಿ "ಮಾಂಸ" ಎಂದರೆ ಸಾಮಾನ್ಯವಾಗಿ ಆಹಾರ ಎಂದಾಗುತ್ತದೆ. NKJVಯಲ್ಲಿ "ಆಹಾರ" ಎಂದಿದೆ. [34]"ಯಥಾರ್ಥ" ಎಂಬ ಗ್ರೀಕ ಪದವು ಭಾಷಾಂತರದಲ್ಲಿ, "ಏಕ ಮನಸ್ಸು" ಅಥವಾ "ಸರಳತೆ" ಎಂದು ಸೂಚಿಸುತ್ತದೆ. [35]ಎರಡು ಭಾನುವಾರಗಳ ಮಧ್ಯೆ ಪೂರ್ಣ ವಾರವಿರುವದರಿಂದ, ಅನೇಕ ಅಮೆರಿಕೆಯ ಸಭೆಗಳಲ್ಲಿ ಮಧ್ಯ ವಾರದಲ್ಲಿ ಆರಾದನೆ ನಡೆಯುತ್ತದೆ, ಬಹುತೇಕ ಸಮಯ ಬುಧವಾರ ರಾತ್ರಿ. ಸತ್ಯವೇದಮ್ ಮಧ್ಯವಾರದ ಆರಾಧನೆಯ ವಿಷಯದಲ್ಲಿ ಏನೂ ಹೇಳುವದಿಲ್ಲ, ಆದರೆ ಆದಿ ಕ್ರೈಸ್ತರು ಕೇವಲ ವಾರದ ಮೊದಲ ಮಾತ್ರವಲ್ಲ, ತಮಗೆ ಸಾಧ್ಯವಾದಾಗಲೆಲ್ಲ ಅನ್ಯೋ ನ್ಯತೆಗಾಗಿ, ದೇವರ ವಾಕ್ಯವನ್ನು ಅಧ್ಯಯನ ಮಾಡುವದಕ್ಕಾಗಿ, ದೇವರನ್ನು ಆರಾಧಿಸುವದಕ್ಕಾಗಿ, ಕ್ರೈಸ್ತ ಸೇವೆಗೆ ಇತರರನ್ನು ತರಬೇತುಗೊಳಿಸುವದಕ್ಕಾಗಿ ಭೇಟಿಯಾದರು ಎಂದು ಸೂಚಿಸುತ್ತದೆ. ಕರ್ತನ ದಿನದ ಆರಾಧನೆಯ ಹೊರತಾಗಿ, ಸಭಿಕರ ಆತ್ಮಿಕ ಅವಶ್ಯಕತೆಗಳನ್ನು ಪೂರೈಸಲು ಸಭೆಯಾಗಿ ಕೂಡಿ ಬರುವ ಸಮಯವನ್ನು ನಿಗದಿ ಮಾಡುವದು ಸ್ಥಳಿಕ ನಾಯಕರ ಜವಾಬ್ದಾರಿಯಾಗಿದೆ. [36]ಕ್ರಿ.ಪೂ, 70ರ ವರೆಗೆ - ಬಹುಶ ಆಲಯವು ನಾಶವಾಗುವವರೆಗೆ, ಆದಿ ಯೆಹೂದ್ಯ ಕ್ರೈಸ್ತರು ಯೆಹೂದ್ಯ ಆರಾಧನೆಯನ್ನು ಆಲಯದಲ್ಲಿ ಮುಂದುವರಿಸಿದರು ಎಂದು ವಿಮರ್ಶಕಾರರು ಊಹಿಸುತ್ತಾರೆ. ಆದರೆ ವಾಕ್ಯ ಭಾಗದಲ್ಲಿನ ಯಾವ ಸಂಗತಿಯೂ ಇದನ್ನು ಕೇಳುವದಿಲ್ಲ. ಕ್ರೈಸ್ತ ಯುಗಕ್ಕೆ ದೇವರ ಸರ್ವ ಚಿತ್ತವು ಪ್ರಕಟವಾಗಲಿಲ್ಲ ನಿಜ, ಆದರೆ ವಚನ 42 ಸೂಚಿಸುವಂತೆ, ಕ್ರೈಸ್ತರು ಹೇಗೆ ಆರಾ ಧಿಸಬೇಕೆಂದು ಮಾತ್ರ ಹೇಳಲಾಗಿದೆ. ವಚನ 47 "ದೇವರನ್ನು ಸ್ತುತಿಸುವದರ" ಕುರಿತು ಸೂಚಿಸುತ್ತದೆ, ಆದರೆ ಈ ವಚನವು ಕ್ರೈಸ್ತರು ತಾವು ಎಲ್ಲಿದ್ದೇವೆಂಬ ಪರಿವೆ ಇಲ್ಲದೇ (ಆಲಯದಲ್ಲಿ ಅಥವಾ ಮನೆಯಲ್ಲಿ), ಏನು ಮಾಡಿದರೋ ಅದನ್ನು ಸೂಚಿಸುತ್ತದೆ. ಆ ಪದದಲ್ಲಿ ಯೆಹೂದ್ಯ ಸ್ತುತಿಯ ಅರ್ಥವನ್ನು ಕುಂಠಿತಗೊಳಿಸುವ ಯಾವ ವಿಷಯವೂ ಇಲ್ಲ. ಅಪೊಸ್ತಲರ ಕೃತ್ಯಗಳು 5:12 ಗಮನಿಸುವಂತೆ - "ಎಲ್ಲರು ಒಗ್ಗಟ್ಟಾಗಿದ್ದು ಸೊಲೊಮೊನನ ಮಂಟಪದಲ್ಲಿರುತ್ತಿದ್ದರು." ಸೊಲೊಮೊನನ ಮಂಟಪವು ಅನ್ಯರ ಅಂಗಳದಲ್ಲಿತ್ತು. ಯೆಹೂದ್ಯ ಆರಾಧನೆಯು ಆಲಯದ ಈ ಸ್ಥಳದಲ್ಲಿ ನಡೆಯುತ್ತಿರಲಿಲ್ಲ. [37]"ರೊಟ್ಟಿ ಮುರಿಯುವದು" ಪ್ರತಿ ದಿನ ಮಾಡುತ್ತಿದುದ್ದರಿಂದ ಮತ್ತು ಕರ್ತನ ಭೋಜನವು ವಾರದ ಮೊದಲನೇಯ ದಿನ ಮಾತ್ರ ತೆಗೆದುಕೊಳ್ಳಬೇಕಾದ್ದರಿಂದ, ಇಲ್ಲಿ ಈ ವಾಕ್ಯವು ಸಾಮಾನ್ಯ ಊಟದ ಕುರಿತಾಗಿದೆ. ಒಟ್ಟಾಗಿ ಭೋಜನ ಮಾಡುವದು ಕ್ರೈಸ್ತರ ಅನ್ಯೋನ್ಯತೆಯನ್ನು ಪ್ರಾಮುಖ್ಯವಾಗಿ ವ್ಯಕ್ತ ಪಡಿಸುವಂಥದ್ದಾಗಿದೆ. ಈ ಅನ್ಯೋನ್ಯ ಭೋಜನವನ್ನು "ಪ್ರೇಮ ಭೋಜನ" ಎಂದು ಕರೆ ಯಲಾಯಿತು (ಯೂದ 12). [38]ಒಂದು ಸಭೆಯು ಬೆಳುಯುತ್ತಿದೆ ಅಂದ ಮಾತ್ರಕ್ಕೆ ಆ "ಬೆಳವಣಿಗೆ" ದೇವರಿಗೆ ಮೆಚ್ಚುಗೆಯಾಗಿದೆ ಎಂದಲ್ಲ. ದೇವರನ್ನು ಮೆಚ್ಚಿಸುವ ಬೆಳವಣಿಗೆಯು ಸತ್ಯದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವದಿಲ್ಲ. ನಾವು ಸಂಖ್ಯೆಯಲ್ಲಿಯೂ ಮತ್ತು ಆತ್ಮಿಕವಾಗಿಯೂ ಬೆಳೆಯ ಬೇಕು ಎಂದು ದೇವರು ಬಯಸುತ್ತಾನೆ. ಆದರೆ ನಂಬಿಗಸ್ತಿಕೆಯು, ಸಂಖ್ಯೆಯಲ್ಲಿನ ಬೆಳವಣಿಗೆಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ವಹಿಸುತ್ತದೆ. ಒಂದು ಕ್ಯಾನ್ಸರಿನ ಗಡ್ಡೆಯು ಬೆಳವಣಿಗೆಯನ್ನು ಸೂಚಿಸುತ್ತದೆ, ಆದರೆ ಅದು ಅನಾರೋಗ್ಯಕರವಾಗಿಯೂ ಮತ್ತು ಜೀವಕ್ಕೆ ಅಪಾಯಕಾರಿಯಾದ ಬೆಳವಣಿಗೆಯೂ ಆಗಿದೆ.

---

## ದೇವರ ರಾಜ್ಯದ/ಸಭೆಯ ಸ್ಥಾಪನೆ

*ಒಂದು ಉದ್ದೇಶಕ್ಕಾಗಿ ರಾಜ್ಯವು/ಸಭೆಯು ಅಸ್ತಿತ್ವದಲ್ಲಿದೆ.* ನಿತ್ಯತ್ವಕ್ಕೂ ಅದು ದೇವರ ಯೋಜನೆ ಮತ್ತು ಉದ್ದೇಶಕ್ಕನುಗುಣವಾಗುವ ಅಸ್ತಿತ್ವದಲ್ಲಿದೆ (ಹೋಲಿಸು ಎಫಸ 3:10, 11).

*ಅದು ತನ್ನ ವಾಗ್ದಾನದಲ್ಲಿ ಜೀವಿಸುತ್ತದೆ.* ಹಳೇ ಒಡಂಬಡಿಕೆಯುದ್ದಕ್ಕೂ, ದೇವರ ರಾಜ್ಯವು/ಸಭೆಯು ಪ್ರಾವಧನೆಗಳಲ್ಲಿ ಮತ್ತು ವಾಗ್ದಾನಗಳಲ್ಲಿ ಅಸ್ತಿತ್ವದಲ್ಲಿತ್ತು. ಕೊನೆಯ

ದಿನಗಳಲ್ಲಿ ಕರ್ತನ ಮನೆಯು ಸ್ಥಾಪಿಸಲ್ಪಟ್ಟು ಮತ್ತು ದೇವರ ವಾಕ್ಯವು ಯೆರೂಸಲೇಮಿನಿಂದ ಹೊರಡುವವವು ಎಂದು ಯೆಶಾಯನು ಹೇಳಿದ್ದನು (ಯೆಶಾಯ 2:2, 3; 1 ತಿಮೊಥೆ 3:15ಯು ಕರ್ತನ ಮನೆಯನ್ನು ಸಭೆಯಾಗಿ ಗುರುತಿಸುತ್ತದೆ). ದಾನಿಯೆಲನು ರೋಮ ಸಾಮ್ರಾಜ್ಯದ ಸಮಯದಲ್ಲಿ ಸ್ಥಾಪಿತವಾಗುವದು ಎಂದು ಪ್ರವಾದಿಸಿದ್ದನು (ಹೋಲಿಸು ದಾನಿಯೆಲನು 2:44).

*ಅದು ತನ್ನ ಸಿದ್ಧತೆಯಲ್ಲಿ ಅಸ್ತಿತ್ವದಲ್ಲಿತ್ತು.* ರೋಮ ಸಾಮ್ರಜದ ದಿನಗಳಲ್ಲಿ ಕ್ರಿಸ್ತನು ತನ್ನ ವೈಯಕ್ತಿಕ ಸೇವೆಯನ್ನು ಪ್ರಾರಂಭಿಸಿದನು. ಆತನ ವೈಯಕ್ತಿಕ ಸೇವೆಯ ಸಮಯದಲ್ಲಿ ದೇವರ ರಾಜ್ಯವು/ಸಭೆಯು ಸಿದ್ಧತೆಯಲ್ಲಿ ಅಸ್ತಿತ್ವದಲ್ಲಿತ್ತು. ಯೇಸು ಮತ್ತು ಸ್ನಾನಿಕಾನಾದ ಯೋಹಾನನು ದೇವರ ರಾಜ್ಯವು "ಸಮೀಪಿಸಿತು" ಎಂದು ಸಾರಿದರು (ಹತ್ತಿರವಾಗಿದೆ; ಮತ್ತಾಯ 4:17; 3:1, 2). ತನ್ನ ರಾಜ್ಯವು ಆತ್ಮಿಕ ರಾಜ್ಯ (ಯೋಹಾನ 18:36) ಎಂದು ಯೇಸು ಒತ್ತಿ ಹೇಳಿದನು ಮತ್ತು "ರಾಜ್ಯ" ಮತ್ತು "ಸಭೆ" ಎರಡೂ ಒಂದೇ ಅರ್ಥ ಕೊಡುವಂತೆ ಉಪಯೋಗಿಸಿದನು (ಮತ್ತಾಯ 16:18, 19).

ತನ್ನ ರಾಜ್ಯವು "ಬಲದಿಂದ" ಬರುವದೆಂದು ಯೇಸು ನುಡಿದನು (ಮಾರ್ಕ 9:1). ತನ್ನ ಪುನರುತ್ಥಾನದ ತರುವಾಯ ಪವಿತ್ರಾತ್ಮನು ಬರುವಾಗ ಬಲವು ಬರುವದೆಂದು ಅಪೊಸ್ತಲರಿಗೆ ಹೇಳಿದನು ಮತ್ತು ಅವರು ಯೆರೂಸಲೇಮಿನಿಂದ ಪ್ರಾರಂಭಿಸಿ ತನಗೆ ಸಾಕ್ಷಿಗಳಾಗಿರುವರು ಎಂದನು (ಅಪೊಸ್ತಲರ ಕೃತ್ಯಗಳು 1:6-8). ಆ ಬಲವು ಆತನ ಹೆಸರಿನಲ್ಲಿ "ಯೆರೂಸಲೇಮಿನಿಂದ ಪ್ರಾರಂಭಿಸಿ ಪಾಪ ಪರಿಹಾರಕ್ಕಾಗಿ ಪಶ್ಚಾತ್ತಾಪ ಪಡಬೇಕೆಂದು ಸಾರಲಾಗುವದು" (ಲೂಕ 24:45-49).

*ಅದು ಬಲದಲ್ಲಿ ಅಸ್ತಿತ್ವದಲ್ಲಿತ್ತು (ಮತ್ತು ಇನ್ನೂ ಮುಂದುವರಿಯುತ್ತಿದೆ).* ಕ್ರಿಸ್ತನ ಮರಣ, ಹೂಣಲ್ಪಟ್ಟ ನಂತರ ಮತ್ತು ಪುನರುತ್ಥಾನದ ತರುವಾಯ, ಪವಿತ್ರಾತ್ಮನು ಪಂಚಾಶತ್ತಮದ ಮೊದಲ ದಿನದಲ್ಲಿ ಬಂದನು (ಅಪೊಸ್ತಲರ ಕೃತ್ಯಗಳು 2:1-4). ಹೀಗೆ ಬಲವು ಬಂದಿತು; ಮತ್ತು ರಾಜ್ಯವು/ಸಭೆಯು ಸ್ಥಾಪಿಸಲ್ಪಟ್ಟಿತು.

ಯೆಶಾಯ ಮತ್ತು ಯೇಸು ಮುಂತಿಳಿಸಿದಂತೆ, ಸುವಾರ್ತೆಯ ಪ್ರಸಂಗವು ಯೆರೂಸಲೇಮಿನಿಂದ ಪ್ರಾರಂಭವಾಯಿತು (ಅಪೊಸ್ತಲರ ಕೃತ್ಯಗಳು 2:29-38). ನಂಬಿದ ಮತ್ತು ಪಶ್ಚಾತಾಪ ಪಟ್ಟ ಜನರು ದೀಕ್ಷಾಸ್ನಾನ ಹೊಂದಿದ ಜನರು ರಾಜ್ಯವು/ಸಭೆಗೆ ಸೇರಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:41, 47; KJV). ಆ ಹಂತದಿಂದ ರಾಜ್ಯವು/ಸಭೆಯು ಅಸ್ತಿತ್ವದಲ್ಲಿ ಬಂದಿತು (ಅಪೊಸ್ತಲರ ಕೃತ್ಯಗಳು 5:11; 8:1, 3; ಕೊಲೊಸ್ಸೆ 1:13; ಇಬ್ರಿಯ 12:28; ಪ್ರಕಟನೆ 1:6).

ಕ್ರಿಸ್ತನು ಈಗ ಪರಲೋಕದಲ್ಲಿನ ತನ್ನ ರಾಜ್ಯದಲ್ಲಿ ಆಳುತ್ತಿದ್ದಾನೆ ಮತ್ತು ಆತನು ತಿರುಗಿ ಬರುವ ವರೆಗೆ ಕಾಲದ ಅಂತ್ಯದ ವರೆಗೆ (ಹೋಲಿಸು 1 ಕೊರಿಂಥ 15:24-27), ತನ್ನ ನಂಬಿಗಸ್ತ ಹಿಂಬಾಲಕರನ್ನು ಪರಲೋಕಕ್ಕೆ ತನ್ನ ಬಳಿಗೆ ತೆಗೆದುಕೊಂಡು ಹೋಗುವವರೆಗೆ ಆಳುತ್ತಾನೆ (ಯೋಹಾನ 14:1-3).

ನೀವು ಕ್ರಿಸ್ತನ ರಾಜ್ಯ/ಸಭೆಯಲ್ಲಿದ್ದೀರಾ?